
ಪ್ರೊ. ಜ್ಯೋತಿ ಹೊಸೂರ

ವ್ಯಕ್ತಿ ಪರಿಚಯ



ಡಾ. ಸಿ.ಕೆ.ನಾವಲಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೩೬

ಪ್ರೊ. ಜ್ಯೋತಿ ಹೊಸೂರ

ವ್ಯಕ್ತಿ ಪರಿಚಯ

ಡಾ. ಸಿ. ಕೆ. ನಾವಲಗಿ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

PROF. JYOTHI HOSURA.
A pen portrait - by Dr. C. K. NAVALAGI.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033
Pages : 40   Price : Rs. 15   2009.

ಪ್ರಥಮ ಮುದ್ರಣ	೨೦೦೯
ಪ್ರತಿಗಳು	೨೦೦೦
ಪುಟಗಳು	೪೦
ಬೆಲೆ	ರೂ.೧೫ (ಹದಿನೈದು ರೂಪಾಯಿ)

ಮುದ್ರಕರು
ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇವರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ - ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಸಿ.ಕೆ. ನಾವಲಗಿ ಅವರು ಪ್ರೊ. ಜ್ಯೋತಿ ಹೊಸೂರ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೩೦-೦೬-೨೦೦೯

ಮುನ್ನುಡಿ

ಪ್ರಾಧ್ಯಾಪಕ ಜ್ಯೋತಿ ಹೊಸೂರ ಉತ್ತರ ಕರ್ನಾಟಕದ ಉತ್ತಮ ವಿದ್ವಾಂಸರಲ್ಲಿ ಒಬ್ಬರು. ಅಧ್ಯಯನ, ಅಧ್ಯಾಪನ, ಶೋಧನೆಯ ಜೊತೆಗೆ ಸಾಹಿತ್ಯ ಕೃಷಿಯಲ್ಲೂ ಗಮನಾರ್ಹವಾದ ಸಾಧನೆಯನ್ನು ಮಾಡಿದ್ದಾರೆ. ಜಾನಪದದ ಅವರ ಆಸಕ್ತಿ ವಿಶೇಷ ಮನ್ನಣೆಗೆ ಪಾತ್ರವಾಗಿದೆ. ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ವಿವೇಚನೆ, ಸಂಶೋಧನೆಯಲ್ಲಿ ಸೋಪಜ್ಞತೆ ತೋರಿದ್ದಾರೆ. ಸಮಗ್ರ ಜಾನಪದ ಗ್ರಹಿಕೆಯಲ್ಲಿ ಅವರ ಪ್ರಾಮಾಣಿಕ ತೊಡಗುವಿಕೆಯ ಕಾಳಜಿ ಎಂಥವರೂ ಮೆಚ್ಚುವಂಥದ್ದು. ಜಾನಪದದ ಮೂಲ ತತ್ವ ಹಾಗೂ ವಿಶ್ಲೇಷಣೆಯಲ್ಲಿ ಕೆಲವು ಹೊಸ ಹೊಳಹುಗಳನ್ನು ನೀಡಿರುವುದು ಅವರ ಹೆಚ್ಚುಗಾರಿಕೆಯಾಗಿದೆ.

ಜಾನಪದ ತಜ್ಞ ಜ್ಯೋತಿ ಹೊಸೂರರ ಬದುಕು ಬರಹವನ್ನು ಸಹಜವಾಗಿ ಬಲ್ಲ ಡಾ. ಸಿ. ಕೆ. ನಾವಲಗಿಯವರು ಆತ್ಮೀಯವಾಗಿ ವ್ಯಕ್ತಿಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಲ್ಲಿ ವಿಮರ್ಶಾತ್ಮಕ ಹೇಳಿಕೆಗಳೂ ಕಾಣಿಸಿಕೊಂಡಿದ್ದು ಹೆಚ್ಚಿನ ಅಧ್ಯಯನಕ್ಕೆ ದಾರಿ ಮಾಡಿಕೊಡುತ್ತವೆ. ಒಟ್ಟಾರೆ ಈ ಕಿರುಪುಸ್ತಕ ಅಧ್ಯಯನಶೀಲರಿಗೆ ಹಲವು ಮಾಹಿತಿಗಳನ್ನು ಒದಗಿಸುತ್ತದೆ.

ಪ್ರೊ. ಡಿ. ಲಿಂಗಯ್ಯ

ಪ್ರೊ. ಜ್ಯೋತಿ ಹೊಸೂರ

ಜೀವನ ಸಾಧನೆ :

ಪ್ರೊ. ಜ್ಯೋತಿ ಹೊಸೂರ ಭಯ ಬರಿಸುವ ಎತ್ತರದ ವ್ಯಕ್ತಿ; ಆದರೆ ಬಿಗುಮಾನವಿಲ್ಲದ, ಸರಳ ಸಜ್ಜನಿಕೆಯ, ನೇರನುಡಿಯ ವ್ಯಕ್ತಿತ್ವ. ಎಲ್ಲ ವರ್ಗದ ಜನರೊಳಗೊಂದಾಗಿ ಬದುಕುವ ಸ್ನೇಹಮಯ ಜನಪದ ಜೀವಿ. ನಡೆ-ನುಡಿ, ಮಾತುಕತೆಗಳೆಲ್ಲದರಲ್ಲಿಯೂ ಅಪ್ಪಟ ಜನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಹಿರಿಯಚೇತನ. ಉಚ್ಚ-ನೀಚ, ಶ್ರೀಮಂತ-ಬಡವ, ಜಾತಿ-ಕುಲ, ಗೋತ್ರ, ಅಧಿಕಾರ-ಅಂತಸ್ತುಗಳ ತಾರತಮ್ಯ ಭಾವವಿಲ್ಲದ ವಿಶಾಲ ಹೃದಯಿ. ಜನಪದರಂತೆ ಕೂಡಿ ದುಡಿಯುವ, ಕೂಡಿ ತಿನ್ನುವ, ಕೂಡಿ ಬಾಳುವ, ಕೂಡಿ ಬೆಳೆಯುವ ಸುಸಂಸ್ಕೃತ ವ್ಯಕ್ತಿ-ವ್ಯಕ್ತಿತ್ವ ಶ್ರೀ ಜ್ಯೋತಿ ಹೊಸೂರವರು.

ಮೂಲತಃ ಲೇಖಕರಾದ ಇವರು ಶಿಷ್ಟ ಸಾಹಿತ್ಯದಲ್ಲಿ ಕೃಷಿಗೈದವರಾದರೂ ಇವರ ವಿಶೇಷ ಪರಿಶ್ರಮವೆಲ್ಲ ಜನಪದ ಸಾಹಿತ್ಯದ ಸಂಗ್ರಹ-ಸಂಪಾದನೆ-ಸಂಶೋಧನೆ-ವಿಮರ್ಶೆ ಹಾಗೂ ಜನಪದ ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ವಿನಿಯೋಗವಾಗಿದೆ. ಜಾನಪದ ಕಾಳಜಿಯುಳ್ಳ ಬೆಟಗೇರಿ ಕೃಷ್ಣಶರ್ಮ, ಆರ್.ಸಿ. ಹಿರೇಮಠ, ಎಂ.ಎಸ್. ಸುಂಕಾಪುರರಂಥವರ ಪ್ರಭಾವವಲಯವೂ ಶ್ರೀ ಜ್ಯೋತಿ ಹೊಸೂರ ಅವರನ್ನು ಜಾನಪದ ಅಧ್ಯಯನದಲ್ಲಿ ತೊಡಗುವಂತೆ ಪ್ರೇರೇಪಿಸಿತು. ಹೀಗಾಗಿ, ಶ್ರೀ ಹೊಸೂರ ಅವರು ತಮ್ಮ ಪ್ರತಿಭೆ-ಪಾಂಡಿತ್ಯಗಳನ್ನೆಲ್ಲ ಜಾನಪದದಲ್ಲಿ ತೋರ್ಪಡಿಸಿಕೊಂಡು, 'ಜಾನಪದ ತಜ್ಞ' ರೆಂದು ತಮ್ಮನ್ನು ತಾವು ಗುರುತಿಸಿಕೊಂಡುದು ಗಮನೀಯ.

ಉತ್ತರ ಕರ್ನಾಟಕದ, ಬೆಳಗಾವಿಯ ರಾಯಬಾಗದ ಜಾನಪದ ಮಣ್ಣಿನ ವಾಸನೆಯನ್ನು ಮೈಮನಗಳಲ್ಲಿ ತುಂಬಿಕೊಂಡ ಈ ಪ್ರಾಮಾಣಿಕ ವ್ಯಕ್ತಿ, ಸ್ನೇಹಿತರ ಸಹಾಯದಿಂದ, ಗುರುಗಳ, ಗುರುಸಮಾನರ ಮಾರ್ಗದರ್ಶನದಿಂದ, ಇತರರ ಸಹಕಾರದಿಂದ ಹಾಗೂ ತಮ್ಮ ಸದ್ವರ್ತನೆ, ನಯವಿನಯಾದಿಗಳಿಂದ ಜನಪದ ಜನಾಂಗವನ್ನು ಗೆದ್ದು, ಜಾನಪದ ಲೋಕದ ವ್ಯಕ್ತಿಯಾಗಿ, ಜನಪದ ಸಂಸ್ಕೃತಿ, ಸಾಹಿತ್ಯ, ಕಲೆಗಳ ನಿತಾಂತ ಪರಂಪರೆಯನ್ನು ಉಳಿಸಿ ಬೆಳೆಸಲು ಹೆಣಗಿದರು. ಗ್ರಾಮೀಣ ರೈತರ, ಗ್ರಾಮೀಣ ವೃತ್ತಿಕಲಾವಿದರ, ಗ್ರಾಮೀಣ ಇತರ ಪ್ರತಿಭೆಗಳ ಮುಗ್ಧತೆಯನ್ನು, ಸರಳತೆಯನ್ನು ಅರ್ಥಮಾಡಿಕೊಂಡು ಲೇಖನಗಳ ಮೂಲಕ ಅವರನ್ನು ಜೀವಂತವಾಗಿರಿಸಿದರು. ಹಳ್ಳಿಗಳಿಗೆ ಹೋಗಿ ಜನಪದ ಸಾಹಿತ್ಯ ಕುರಿತು ಮನಮುಟ್ಟುವ ಅನೇಕ ಭಾಷಣಗಳನ್ನು ಮಾಡಿದರು. ಅಲ್ಲಿ ಜಾನಪದ ಕಲಾಮೇಳಗಳನ್ನು ಸಂಘಟಿಸಿ, ಜನಪದ ಕಲೆಗಳಿಗೆ ಕಾಯಕಲ್ಪ ಚಿಕಿತ್ಸೆ ಕೂಡ ನೀಡಿದರು.

ತೋಂಡಿ ಸಂಪ್ರದಾಯದ 'ಜನಪದ ಸಾಹಿತ್ಯ' ಜ್ಯೋತಿ ಹೊಸೂರರಂಥ ವಿದ್ವಾಂಸರ ಶ್ರದ್ಧಾಪೂರ್ವಕ ಅಧ್ಯಯನಕ್ಕೆ ಒಳಗಾಯಿತು. ಜನಪದ ಹಾಡು (ತ್ರಿಪದಿ), ಒಡಪು ಇತ್ಯಾದಿ ಸಂಗ್ರಹಿಸುವುದರೊಂದಿಗೆ, ಜನಪದ ಸಾಹಿತ್ಯದ ಮೌಲ್ಯಮಾಪನವೂ ಇದರಿಂದ ತಕ್ಕ ಮಟ್ಟಿಗೆ ಚೆನ್ನಾಗಿಯೇ ನಡೆದುದು ಗಮನಾರ್ಹ ಸಂಗತಿ. ಜನಪದ ಸಾಹಿತ್ಯವನ್ನು ಸಂಪಾದನಾ ಶಾಸ್ತ್ರದ ನೆಲೆಯಲ್ಲಿ ಸಂಪಾದಿಸಿ, ಮೂಲ ಜಾನಪದ ಸತ್ವವನ್ನು ಉಳಿಸಿ, ವಿಶ್ಲೇಷಿಸಿರುವ ಕೆಲವೇ ಕೆಲವು 'ಜಾನಪದ ತಜ್ಞ'ರಲ್ಲಿ ಜ್ಯೋತಿ ಹೊಸೂರ ಒಬ್ಬರು. ಅಪಾರವಾದ ಪ್ರಸ್ತುತ ಸಾಹಿತ್ಯದಲ್ಲಿ ತಮ್ಮ ಕೈಗೆ ದೊರೆತಷ್ಟನ್ನು ಸಂಗ್ರಹಿಸಿ, ಸಂಪಾದಿಸಿ, ಸಂಶೋಧಿಸಿ, ಜನಪದ ಮೂಲ ಸತ್ವವನ್ನು ಅದರ ಸಾಹಿತ್ಯದ ಶಕ್ತಿಯನ್ನು ಎತ್ತಿ ತೋರುವಲ್ಲಿ ಶಕ್ತ್ಯಾನುಸಾರ ಶ್ರಮಿಸಿದವರಿವರು. ಜಾನಪದ ಪರಿಸರದಲ್ಲಿ ಹುಟ್ಟಿ ಬೆಳೆದುಬಂದವರಾದುದರಿಂದ ಹಾಗೂ ಅದರ ಆಳಅಗಲಗಳನ್ನು ಅರಿತವರಾದುದರಿಂದ ಮತ್ತು ಅಧ್ಯಯನದ ಮೂಲಕವೂ

ಅದರ ಒಳನೋಟಗಳನ್ನು ಗುರುತಿಸಬಲ್ಲವರಾದುದರಿಂದ ಹೊಸೂರವರು ಜನಪದ ಸಾಹಿತ್ಯವನ್ನು ಸಮರ್ಪಕವಾಗಿ ಸಂಪಾದಿಸಿದುದಲ್ಲದೆ, ಸಮರ್ಥವಾಗಿ ಸಂಶೋಧಿಸಿದ್ದಾರೆ, ವಿಮರ್ಶಿಸಿದ್ದಾರೆ. ಈ ಜಾನಪದ ಕಾರ್ಯಕ್ಕಾಗಿ ಹೋರಾಟ ನಡೆಸಿದ್ದಾರೆ. ಇವರದು ಹೋರಾಟದ ಬದುಕು ಕೂಡ. ಆ ಹೋರಾಟದಲ್ಲಿಯೇ ತಮ್ಮ ಅನುಪಮವಾದ 'ಜಾನಪದ ವ್ಯಕ್ತಿತ್ವ' ವನ್ನು ರೂಪಿಸಿಕೊಂಡಿದ್ದಾರೆ, ದೀಪ್ತಿಗೊಳಿಸಿಕೊಂಡಿದ್ದಾರೆ.

ದಾಖಲೆಗಳ ಪ್ರಕಾರ ಗ್ರಾಮೀಣರಾದ ಇವರ ಪೂರ್ಣ ಹೆಸರು ಶ್ರೀ ಜೋತೆಪ್ಪ ಶಿವಪ್ಪ ಹೊಸೂರ. ತಂದೆ ಶಿವಪ್ಪ, ತಾಯಿ ಸತ್ಯೆವ್ವ. ಇವರ ಉದರದಿಂದ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಮುಗಳಖೋಡ ಗ್ರಾಮದಲ್ಲಿ ದಿನಾಂಕ ೯-೯-೧೯೩೭ ರಂದು ಜೋತೆಪ್ಪ ಜನಿಸುತ್ತಾನೆ(ಶಾಲಾ ದಾಖಲೆಗಳ ಪ್ರಕಾರ ೧-೬-೧೯೩೯). ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಹುಟ್ಟೂರು, ರಾಯಬಾಗಗಳಲ್ಲಿ ಪೂರೈಸಿದ ಜೋತೆಪ್ಪ, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೩೦ರಲ್ಲಿ ಎಂ.ಎ. ಕನ್ನಡ ವಿಷಯದಲ್ಲಿ ಪ್ರಥಮ ವರ್ಗದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಮುಗಿಸಿ, ಹಾರೋಗೇರಿಯಲ್ಲಿ ಹೈಸ್ಕೂಲ ಶಿಕ್ಷಕರಾಗಿ (೧೯೬೧-೬೮, ೧೯೭೦-೭೨) ವೃತ್ತಿ ಜೀವನ ಆರಂಭಿಸುತ್ತಾರೆ. ೧೯೭೨ ರಿಂದ ೭೪ರ ಅವಧಿಯಲ್ಲಿ ರಾಯಬಾಗ ಜ್ಯೂನಿಯರ್ ಕಾಲೇಜಿನಲ್ಲಿ ಪ್ರಾಚಾರ್ಯ ಹುದ್ದೆಗೆ ಸೇರಿಕೊಂಡು, ಸಮರ್ಥ ಸೇವೆ ಸಲ್ಲಿಸಿ, ಮುಂದೆ ೧೯೭೪ ರಿಂದ ೧೯೯೩ರವರೆಗೆ ರಾಯಬಾಗ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ, ಪ್ರವಾಚಕರಾಗಿ ಹಾಗೂ ಪ್ರಾಚಾರ್ಯರಾಗಿ ಅರ್ಥಪೂರ್ಣ ಸೇವೆಗೈದು ೧-೧-೧೯೯೪ರಂದು ಸ್ವ ಇಚ್ಛಾ ಸೇವಾನಿವೃತ್ತಿ ಹೊಂದಿದರು. ಈ ಅಧ್ಯಾಪನ ಮತ್ತು ಆಡಳಿತಾವಧಿಯಲ್ಲಿ ಶಿಷ್ಟ ಮತ್ತು ಜಾನಪದಕ್ಕೆ ಸಂಬಂಧಿಸಿದ ಹಲವಾರು ಲೇಖನಗಳನ್ನು, ಪ್ರಬಂಧಗಳನ್ನು, ಪುಸ್ತಕಗಳನ್ನು 'ಜ್ಯೋತಿ ಹೊಸೂರ' ಎಂಬ ಹೆಸರಿನಿಂದ ಜೋತೆಪ್ಪ ಬರೆದರು ಮತ್ತು ಪ್ರಕಟಿಸಿದರು. ಜಾನಪದಕ್ಕೆ ಮೀಸಲಾದ 'ಜನಪದ ಮಂಟಪ', ಶಿಷ್ಟ ಸಾಹಿತ್ಯಕ್ಕೆ

ಮೀಸಲಾದ 'ಕಾಲಗತಿ' ಎರಡು ಪ್ರಕಾಶನ ಸಂಸ್ಥೆಗಳಿಗೆ ಹುಟ್ಟುಹಾಕಿ ತಾವು ಬರೆದ ಮತ್ತು ಇತರರು ಬರೆದ ಕೃತಿಗಳನ್ನು ಸಂಸ್ಥೆಯ ಮೂಲಕ ಪ್ರಕಾಶನಗೊಳಿಸಿದರು. ಅಲ್ಲದೆ ಇವರು ತಮ್ಮ ಸಂಪಾದಕತ್ವದಲ್ಲಿ ಕಾಲ/ ಕಾಲಗತಿ ಪತ್ರಿಕೆಯನ್ನು ನಿರಂತರ ಎರಡು ವರುಷ ನಡೆಸಿದರು. ಇತರರೊಂದಿಗೆ ಕೆಲವಾರು ಕೃತಿಗಳನ್ನು ಸಂಪಾದಿಸಿದರು. ಇವರು, ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು, ಪ್ರಥಮ ವಿಶ್ವಕನ್ನಡ ಮೇಳ. ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳು ಮತ್ತು ಕನ್ನಡ ಸಾಹಿತ್ಯ ಅಕಾಡೆಮಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇತ್ಯಾದಿಗಳು ಸಂಘಟಿಸಿದ ವಿವಿಧ ಗೋಷ್ಠಿಗಳಲ್ಲಿ ಸುಮಾರು ೫೦ ಪ್ರೌಢಪ್ರಬಂಧಗಳನ್ನು ಮಂಡಿಸಿದ್ದಾರೆ. ಇವುಗಳಲ್ಲಿ ಜಾನಪದದ ಪ್ರೌಢ ಪ್ರಬಂಧಗಳೇ ಅಧಿಕವಾದುವು ಎಂಬುದನ್ನು ಲಕ್ಷಿಸಬೇಕು. ಅಭಿನಂದನ ಗ್ರಂಥಗಳು, ಸಂಸ್ಮರಣ ಗ್ರಂಥಗಳು, ಸಾಹಿತ್ಯಕ ಪತ್ರಿಕೆಗಳು, ವಾರ್ಷಿಕ ಪತ್ರಿಕೆಗಳು, ವಿವಿಧ ನಿಯತಕಾಲಿಕಗಳಲ್ಲಿ ಸುಮಾರು ೮೦ ಪ್ರೌಢ ಬಿಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೀಯುತರ ನಾಡು-ನುಡಿಯ ಈ ಬಗೆಯ ಸೇವೆಯನ್ನು ಅನುಲಕ್ಷಿಸಿ, ಕರ್ನಾಟಕ ಸರಕಾರ ಇವರಿಗೆ ದಿನಾಂಕ ೧-೧೧-೨೦೦೨ರಂದು 'ಕನಾಟಕ ರಾಜ್ಯೋತ್ಸವ' ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಹಾಗೆಯೇ ಇವರ ಜಾನಪದದ ವಿವಿಧ ಮುಖದ ಸೇವೆಯನ್ನು ಪರಿಗಣಿಸಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೯ನೆಯ ಸಾಲಿನ 'ಜಾನಪದ ತಜ್ಞ' ಪ್ರಶಸ್ತಿಯನ್ನು ದಿನಾಂಕ ೨೯-೧-೧೯೯೦ರಲ್ಲಿ ನೀಡಿ ಗೌರವಿಸಿತು. ನಾಗನೂರು-ರುದ್ರಾಕ್ಷಿ ಮಠದ ಪ್ರತಿಭಾ ಪುರಸ್ಕಾರ (೨೦೦೨); ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನದ ಸಿರಿಗನ್ನಡ ಗೌರವ ಪ್ರಶಸ್ತಿಗಳು (೨೦೦೪) ಶ್ರೀಯುತರಿಗೆ ಲಭಿಸಿವೆ.

ನಮ್ಮ ನಾಡಿನ ವಿವಿಧ ಸಂಸ್ಥೆಗಳು ಹೊಸೂರವರಿಗೆ ಸ್ಥಾನಮಾನಗಳ ಗೌರವ ಹಾಗೂ ಗೌರವ ಸದಸ್ಯತ್ವ ನೀಡುವ ಮೂಲಕ, ಗೌರವವನ್ನು ಸೂಚಿಸಿವೆ. ದಿನಾಂಕ ೧೩-೪-೨೦೦೧ ರಂದು ಹಾರೂಗೇರಿಯಲ್ಲಿ ಜರುಗಿದ ರಾಯಬಾಗ

ತಾಲ್ಲೂಕು ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಹಂಪಿ ಕ.ವಿ.ವಿ. ಮತ್ತು ಗದಗ ಜಿಲ್ಲಾ ಕುರುಬರ ಸಂಘ, ಆಶ್ರಯದಲ್ಲಿ ಹಮ್ಮಿಕೊಂಡ 'ಹಾಲುಮತ ಸಂಸ್ಕೃತಿ ಸಮ್ಮೇಳನ'ದ ಸರ್ವಾಧ್ಯಕ್ಷರಾಗಿದ್ದರು (೨೦೦೮). ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇದರ ಸದಸ್ಯರಾಗಿ ೧೯೯೨ ರಿಂದ ೧೯೯೫ರವರೆಗೆ ಜನಪದ ಸೇವೆ ಮಾಡಿದ್ದಾರೆ. ಧಾರವಾಡ ಆಕಾಶವಾಣಿ ಕೇಂದ್ರಕ್ಕಾಗಿ ಜಾನಪದ ಕಲಾವಿದರ ಧ್ವನಿ ಪರೀಕ್ಷಾ ಸಮಿತಿಯ ಸದಸ್ಯರೆಂದು ೧೯೯೧ ರಿಂದ ೧೯೯೨ರವರೆಗಿನ ಅವಧಿಗೆ ನಾಮಕರಣಗೊಂಡು ಕಾರ್ಯ ನಿರ್ವಹಿಸಿದ್ದಾರೆ. ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ ಸಿನೇಟ್ ಸದಸ್ಯರೆಂದು ಮಾನ್ಯ ರಾಜ್ಯಪಾಲರಿಂದ ಮೂರು ವರುಷಗಳ ಅವಧಿಗೆ ೧೯೯೬ರ ಜೂನ್ ತಿಂಗಳಲ್ಲಿ ೧೯೯೯ ವರೆಗಿನ ಅವಧಿಗೆ ನಾಮಕರಣಗೊಂಡಿದ್ದರು. ಹಾಗೆಯೇ ಕನಕದಾಸರ ಕಾಗಿನೆಲೆ ಅಭಿವೃದ್ಧಿ ಟ್ರಸ್ಟಿನ ಸದಸ್ಯರಾಗಿ ೧೭-೭-೨೦೦೨ ರಂದು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೇಮಕಗೊಂಡಿದ್ದಾರೆ. ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಗೊಂಡಿರುವ ಡಾ। ಶಂಬಾ ಜೋಶಿ ಅಧ್ಯಯನ ಪೀಠದ ಸಲಹಾ ಸಮಿತಿಯ ಸದಸ್ಯರಾಗಿ ಕುಲಪತಿಗಳಿಂದ ೫-೧೧-೨೦೦೧ ರಂದು ನೇಮಕಗೊಂಡಿದ್ದರು. ಅಂತೆಯೇ ಧಾರವಾಡ, ಕ.ವಿ.ವಿ. ಯಲ್ಲಿ ಸ್ಥಾಪನೆಗೊಂಡಿರುವ 'ಕನಕ ಅಧ್ಯಯನ ಪೀಠ'ದ ಸಂಯೋಜಕರಾಗಿ ದಿನಾಂಕ ೩-೧-೨೦೦೨ರಂದು ಆಯ್ಕೆಗೊಂಡು, ಸೇವೆ ಸಲ್ಲಿಸಿದ್ದಾರೆ. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ರಚನಾ ಸಮಿತಿಯ ಸದಸ್ಯರಾಗಿಯೂ (೨೦೦೫) ಸೇವೆಗೈದಿದ್ದಾರೆ. ಇವೆಲ್ಲ ಪ್ರೊ. ಜ್ಯೋತಿ ಹೊಸೂರ ಅವರ ಅನುಪಮ ಸೇವೆಗೆ, ಕರ್ತೃತ್ವ ಶಕ್ತಿಗೆ ಸಂದ ಗೌರವ-ಪ್ರಶಸ್ತಿಗಳು.

'ಜಾನಪದ ತಜ್ಞ' ರೆಂಬ ಆದರದ ಅಭಿಧಾನಕ್ಕೆ ಪಾತ್ರರಾದ ಪ್ರೊ. ಜ್ಯೋತಿ ಹೊಸೂರ ಅವರ ಜಾನಪದ ಕಾರ್ಯಚಟುವಟಿಕೆಗಳ ವಿಶೇಷತೆಗಳನ್ನು

ಗುರುತಿಸುವುದರ ಮೂಲಕ, ಅವರಿಂದ ಜಾನಪದಕ್ಕೆ ಸಂದ ಕೊಡುಗೆಯನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಪ್ರಕಟಿತ ಕೃತಿಗಳ ವಿವರ :

೧. ಬೆರೆಸಿ ಇಟ್ಟೀನ ಬೆಲ್ಲ ಸೆನಗಡಲಿ (ಜನಪದ ತ್ರಿಪದಿ ಸಂಕಲನ) ೧೯೬೯

೨. ಹೆಸರ ಹೇಳ್ತೀನಿ ಒಡಪಕಟ್ಟಿ (ಜನಪದ ಒಡಪುಗಳ ಸಂಗ್ರಹ) ೧೯೭೧

೩. ಜಾನಪದ ಉಪಾಸನೆ (ಸಂಶೋಧನಾತ್ಮಕ–ವಿಮರ್ಶಾತ್ಮಕ ಲೇಖನಗಳ ಸಂಗ್ರಹ) ೧೯೮೧

೪. ಕನಕದಾಸ ಜೀವನ ವಿಚಾರ (ಸಂಶೋಧನಾತ್ಮಕ ಚರಿತ್ರೆ) ೧೯೮೩

೫. ಜಾತಿಗಾರರ ಜಾತಕ (ಜನಪದ ವೃತ್ತಿಕಲಾವಿದರ ಜನಾಂಗಿಕ ಅಧ್ಯಯನ) ೧೯೮೫

೬. ಜಾನಪದ ಕುರಿತು (ಸಂಶೋಧನಾತ್ಮಕ–ವಿಮರ್ಶಾತ್ಮಕ ಲೇಖನಗಳ ಸಂಕಲನ) ೧೯೮೬

೭. ಸ್ನೇಹ ಸಂಪದ (ಬಿ.ಎ. ಸನದಿ ಅಭಿನಂದನ ಸಂಪುಟ) ೧೯೯೬

೮. ಶಂಕರಾಭಿನಂದನ (ಎಸ್.ಬಿ. ಪಾಟೀಲ ಸಂಭಾವನಾ ಗ್ರಂಥ) ೧೯೯೯

೯. ಸತ್ಯಾನ್ವೇಷಕ ಡಾ. ಶಂ.ಬಾ. ಜೋಶಿ (ಜೀವನ ಮತ್ತು ಕೃತಿಗಳು) ೨೦೦೦

೧೦. ಸೇವಾಭಾವದ ಹೋರಾಟಗಾರ (ಜಿ.ಎಸ್. ಹಿಟ್ಟಣಗಿ ಅಜ್ಜನ ಜೀವನ ಚರಿತ್ರೆ) ೨೦೦೨

೧೧. ಶಿವಶರಣರ ಕ್ರಾಂತಿಕಾರಿ ಮೌಲಿಕ ವಚನಗಳು. (ಆಯ್ದ ವಚನಗಳ ಸಂಪಾದನೆ) ೨೦೦೨

೧೨) ಡೊಳ್ಳಿನ ಹಾಡುಗಳ ಸಮೀಕ್ಷೆ : ೨೦೦೩

೧೩) ಸಾತ್ವಿಕ ಸಾಹಿತಿ ಡಾ. ಬೆಟಗೇರಿ ಕೃಷ್ಣ ಶರ್ಮ, ೨೦೦೪

೧೪) ದತ್ತಗೌರವ (ಸಂಭಾವನಾ ಗ್ರಂಥ) ೨೦೦೪
೧೫) ಭ್ರಮೆಗಳ ಮೇಲೆ ಬೆಳಕು : ೨೦೦೫
೧೬) ಅಂತಃಸತ್ವದ ಸಾಧಕ ಕನಕದಾಸ : ೨೦೦೬
೧೭) ಬೀರಪ್ಪ ದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು ೨೦೦೭
೧೮) ಸಂಗೊಳ್ಳಿ ರಾಯಣ್ಣನ ವ್ಯಕ್ತಿತ್ವ ಚಿತ್ರಣದ ಓತಾಸಕ್ತಿಗಳು : ೨೦೦೯.

ಇತರರೊಂದಿಗೆ ಸಂಪಾದನೆ

೧೯) ಹೀಚುಹಣ್ಣು (ಕಥಾಸಂಕಲನ) ೧೯೭೯
೨೦) ಬೆಳುವಲ (ಬೆಟಗೇರಿ ಕೃಷ್ಣಶರ್ಮರ ಅಭಿನಂದನ ಗ್ರಂಥ) ೧೯೮೨
೨೧) ಕವಿಭೂಷಣ (ಬೆಟಗೇರಿ ಸತ್ಕಾರ ಸಂಸ್ಮರಣ ಸಂಚಿಕೆ) ೧೯೮೨
೨೨) ಪ್ರಜ್ಞಾಪ್ರಕಾಶ (ಸಂಸ್ಮರಣ ಸಂಚಿಕೆ) ೧೯೮೫.

ಇವುಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ಕೃತಿಗಳನ್ನು ಮಾತ್ರ ವಿಶ್ಲೇಷಣೆಗೊಳಪಡಿಸಿ, ಹೊಸೂರ ಅವರ ಜಾನಪದ ಕಾರ್ಯವೈಖರಿ ಹಾಗೂ ವಿಶೇಷತೆಗಳನ್ನು ಎತ್ತಿತೋರಿಸುವ ಪ್ರಯತ್ನಮಾಡಲಾಗಿದೆ.

ಬೆರಸಿ ಇಟ್ಟೇನ ಬೆಲ್ಲ ನೆನಗಡಲಿ

ಪ್ರೊ. ಜ್ಯೋತಿ ಹೊಸೂರ ಅವರು ಜಾನಪದ ಸಂಗ್ರಹ ಸಂಪಾದನೆ ಹಾಗೂ ಅಧ್ಯಯನ ಮತ್ತು ಜಾನಪದ ಪ್ರಜ್ಞೆಯ ಜಾಗೃತಿ ಇತ್ಯಾದಿ ಕುರಿತು ಕಳೆದ ಐದು ದಶಕಗಳಿಂದ ಆಸಕ್ತಿಯಿಂದ ದುಡಿದವರು. ತಮ್ಮ ಸ್ವಂತದ 'ಜಾನಪದ ಮಂಟಪ'ದ ಮೂಲಕ ಜಾನಪದ ಸಂಬಂಧಿತ ಪುಸ್ತಕಗಳನ್ನು, ಅವರೇ ಹೇಳಿಕೊಂಡಂತೆ ಕೇವಲ ಹವ್ಯಾಸಕ್ಕಾಗಿ ಪ್ರಕಟಿಸಿದವರು. 'ಪ್ರಸ್ತುತ ಬೆರಸಿ ಇಟ್ಟೇನ ಬೆಲ್ಲ ನೆನಗಡಲಿ' ಇವರ ಪ್ರಪ್ರಥಮ ಜನಪದ ಗೀತ ಸಂಗ್ರಹ. ಕನ್ನಡದಲ್ಲಿ ಜಾನಪದದ ವೈಜ್ಞಾನಿಕ ಅಧ್ಯಯನ, ಶಾಸ್ತ್ರೀಯ ಅಧ್ಯಯನ ಭರದಿಂದ ನಡೆದ ಸಂದರ್ಭ (೧೯೬೬ ರಿಂದೀಚೆಗೆ) ದಲ್ಲಿಯೇ, ಹೊಸೂರ

ಅವರು ವೈಜ್ಞಾನಿಕ ಸಂಗ್ರಹ, ಸಾಧನೆ, ಸಂಪಾದನೆಯ ನೆಲೆಯಲ್ಲಿಯೇ ಪ್ರಸ್ತುತ ಕೃತಿಯನ್ನು ಪ್ರಕಟಿಸಿದರು (೧೯೬೯). ಜನಪದವನ್ನು ಸಂಗ್ರಹಿಸಿ ಕಾದಿಟ್ಟು ಒಂದು ರೀತಿಯ ಪುಣ್ಯದ ಕಾರ್ಯಮಾಡಿದ್ದಾರೆ. ಇದ್ದ ಜನಪದವನ್ನು ಉಳಿಸಿಕೊಳ್ಳುವುದು ಅತ್ಯಂತ ಮಹತ್ವಪೂರ್ಣವಾದುದು; ಕಳೆದುದು ಅದೆಷ್ಟೋ! ಆಧುನಿಕ ಜೀವನ ಶೈಲಿಯ ಸಂದರ್ಭದಲ್ಲಿ ಕುಟ್ಟುವುದು, ಬೀಸುವುದು, ಹತ್ತಿಬಿಡಿಸುವುದು, ಹಂತಿ ಹೊಡೆಯುವುದು ನಿಂತುಬಿಟ್ಟಿದೆ. ಆ ಕಾರ್ಯವನ್ನು ಇಂದು ಯಂತ್ರಗಳು ಮಾಡುತ್ತಿವೆ. ಇದರಿಂದ ಜನಪದ ಸಾಹಿತ್ಯ ಮಡಿಗೂಡಿ ಹೋಗುತ್ತಿದೆ. ಇವನ್ನು ಮನಗಂಡ ಜ್ಯೋತಿಯವರು ಇರುವಷ್ಟನ್ನಾದರೂ ಉಳಿಸೋಣ; ನಮ್ಮ ಸಂಸ್ಕೃತಿ ಪರಂಪರೆ ತಕ್ಕ ಮಟ್ಟಿಗಾದರೂ ಮುಂದಿನವರಿಗೆ ಗೊತ್ತಾಗಲಿ ಎನ್ನುವ ಸದುದ್ದೇಶದಿಂದ, ಇತರರಂತೆ ತಾವೂ ಜಾನಪದವನ್ನು ಸಂಗ್ರಹಿಸುವ, ವ್ಯಾಖ್ಯಾನಿಸುವ, ಸಂಶೋಧಿಸುವ, ಅಭ್ಯಸಿಸುವ ಕಾರ್ಯದಲ್ಲಿ ತೊಡಗಿದುದು ನಿಜಕ್ಕೂ ಶ್ಲಾಘನೀಯವಾದುದು.

'ಬೆರಸಿ ಇಟ್ಟೀನಿ ಬೆಲ್ಲ ನೆನಗಡಲಿ' – ಈ ತ್ರಿಪದಿ ಸಂಗ್ರಹ, ಜನಪದ ಸಾಹಿತ್ಯದ ಕೆನೆಪಾಲಿನಂತಿದೆ. ಅತ್ಯಂತ ಉತ್ಕೃಷ್ಟ ಸಂಕಲನವು. ಇದರಲ್ಲಿಯ ಸಂಗ್ರಹ ಕಾರ್ಯ ಅಚ್ಚುಕಟ್ಟಾಗಿದೆ ಮತ್ತು ಕ್ರಮಬದ್ಧವಾಗಿದೆ. ಇಲ್ಲಿಯ ತ್ರಿಪದಿಗಳಲ್ಲಿ ಕಾವ್ಯಗುಣ, ಭಾಷೆಯ ವೈಶಿಷ್ಟ್ಯ, ಪ್ರಾದೇಶಿಕ ವೈವಿಧ್ಯತೆಯಿದೆ. ಈ ಬಗೆಯ ಹಾಡುಗಳ ಆಯ್ಕೆಯಲ್ಲಿ ಸಂಪಾದಕರು ತಮ್ಮ ಜಾಣ್ಮೆಯನ್ನು ತೋರಿದ್ದಾರೆ. ಅಂತೆಯೇ ಕೃತಿಯ ಮುನ್ನುಡಿಯಲ್ಲಿ ಡಾ॥ ಆರ್.ಸಿ. ಹಿರೇಮಠ ಅವರು, "ಗರತಿ ಹಾಡುಗಳ ನಂತರ ಮೂವತ್ತೆಂಟು ವರುಷಗಳ ಮೇಲೆ ಅದೇ ಮಾದರಿಯ ಇನ್ನೊಂದು ಅಷ್ಟೇ ಎತ್ತರದ ಜನಪದ ಗೀತ ಸಂಗ್ರಹ 'ಬೆರಸಿ ಇಟ್ಟೀನಿ ಬೆಲ್ಲ ನೆನಗಡಲಿ' ಪ್ರಕಟವಾಗುತ್ತಿರುವುದು ಗಮನಾರ್ಹ ಸಂಗತಿ" ಎಂದು ಮೆಚ್ಚಿ ನುಡಿದಿದ್ದಾರೆ. ಉತ್ತರ ಕರ್ನಾಟಕದಲ್ಲಿ ಎರಡನೇ ತಲೆಮಾರಿನ ವಿದ್ವಾಂಸರಲ್ಲೊಬ್ಬರಾದ ಹೊಸೂರ ಅವರು, ಜಾನಪದವನ್ನು ಅದರ ಸಂಗ್ರಹಣೆಯ ಮೂಲಕ ಉಳಿಸುವ ಕಾರ್ಯದಲ್ಲಿ ತೊಡಗಿದವರು.

ಇಲ್ಲಿಯವರೆಗಿನ ಸಂಗ್ರಹಗಳಲ್ಲಿಯ ಹಾಡುಗಳು ಪುನರಾವೃತ್ತಿಯಾಗದಂತೆ, ಈ ಸಂಗ್ರಹವನ್ನು ಹೊರತರಲು ಪ್ರಯತ್ನಿಸಿದ್ದಾರಾದರೂ, ಗರತಿ ಹಾಡಿನ ಸಂಗ್ರಹದಲ್ಲಿಯ ಒಂದೆರಡು ಹಾಡು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಸೇರಿಕೊಂಡಿವೆ. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಊರುಗಳಾದ ಮುಗಳಖೋಡ, ಹಾರೂಗೇರಿ, ಖೇಂಡವಾಡ, ಬಿಣದಾಳ ಮುಂತಾದ ಊರುಗಳಲ್ಲಿ ಇಲ್ಲಿಯ ಹಾಡುಗಳನ್ನು ಸಂಗ್ರಹಕಾರರು ಕಷ್ಟಪಟ್ಟು ಸಂಗ್ರಹಿಸಿದ್ದಾರೆ. ತಮ್ಮ ನಿತ್ಯದ ಕೆಲಸ ಕಾರ್ಯಗಳಲ್ಲಿ ಗ್ರಾಮೀಣ ಗಂಡಸರು, ಹೆಂಗಸರು ಹಾಡಿಕೊಂಡ ಹಾಡುಗಳಿವು. ಬದುಕಿನ ವಿವಿಧ ಭಾವಗಳನ್ನು ಅಭಿವ್ಯಕ್ತ ಮಾಡುವ ಈ ಹಾಡುಗಳನ್ನು ಒಂದು ವ್ಯವಸ್ಥೆಯಲ್ಲಿ ಅವುಗಳ ಸೊಲ್ಲಿನಲ್ಲಿಯೇ ಹೆಸರಿಟ್ಟು ವಿಭಾಗಿಸಿದ್ದಾರೆ. ಓದುಗರ ಅರ್ಥಗ್ರಹಿಕೆಯ ಅನುಕೂಲಕ್ಕಾಗಿ ಪುಸ್ತಕದ ಕೊನೆಯಲ್ಲಿ ಪ್ರಾದೇಶಿಕ ವೈಶಿಷ್ಟ್ಯ ಹೊಂದಿದ ಪದಗಳ ಟಿಪ್ಪಣಿ ಮತ್ತು ಅರ್ಥಕೋಶ ಕೊಟ್ಟಿದ್ದಾರೆ. ಆದರೆ, ತಮ್ಮ ಕ್ಷೇತ್ರಕಾರ್ಯದ ಅನುಭವಗಳನ್ನು ಹೇಳಿಕೊಳ್ಳದೆ ಇರುವುದು ಎದ್ದುಕಾಣುವ ಒಂದು ಕೊರತೆ. ಇಲ್ಲಿಯ ತ್ರಿಪದಿಗಳನ್ನು, 'ಏಳುತಲೆ ನೆನದೇನ ಏಳೆಂಟು ದೇವರನ', ಸುತ್ತಿರುವ ಬಳಗ ಸುಖವಿರಲಿ, ಕಾಮಕಸ್ತೂರಿ ನಿನಕಾಣದೆ ಇರಲಾರೆ, ಹ್ಯಾಗೇಸಿ ಬರಲಿ ಜಗದಾಗ, ಹಾರ್‍ಯಾಡತಾವ ಗಜನಿಂಬಿ, ಬೆಳಿ ಮುತ್ತಿನ್ಹಾಂಗ ಬೆಳಜ್ವಾಳ – ಹೀಗೆ ಆರು ವಿಭಾಗಗಳಲ್ಲಿ ಅಚ್ಚುಕಟ್ಟಾಗಿ ಸಂಗ್ರಹಿಸಿದುದು ನೂತನವಾಗಿದೆ ಮತ್ತು ಆಕರ್ಷಕವಾಗಿದೆ.

ಹೆಸರ ಹೇಳ್ತೀನಿ ಒಡಪಕಟ್ಟಿ

'ಒಡಪು' ಜನಪದ ಸಾಹಿತ್ಯದ ಗದ್ಯಪ್ರಕಾರ. ಉತ್ತರ ಕರ್ನಾಟಕದಲ್ಲಿ ಮಾತ್ರ ಒಡಪುಗಳ ಪರಂಪರೆ ಇದೆ. ಹಳ್ಳಿಗರು ತಮ್ಮ ದಾಂಪತ್ಯ ಪ್ರೇಮವನ್ನು ಹೆಸರು ಕೇಳುವ, ಹೆಸರು ಹೇಳುವ ಪ್ರಾಸಬದ್ಧ ಗದ್ಯರೂಪದ, ಸರಸನುಡಿಗಳ ಮೂಲಕ ಹೊಮ್ಮಿಸುವ ಮಾಧ್ಯಮ ಒಡಪು. ಗಂಡುಮಕ್ಕಳ ಒಡಪುಗಳು, ಹೆಣ್ಣುಮಕ್ಕಳ ಒಡಪುಗಳು ಎಂದು 'ಒಡಪು' ಗಳನ್ನು ಎರಡು ಬಗೆಯಲ್ಲಿ

ಗುರುತಿಸಲಾಗಿದೆ. ಹೆಣ್ಣು ಮಕ್ಕಳ ಒಡಪುಗಳಿಗೇ ಪ್ರಾಮುಖ್ಯತೆ. ಇವು ಸಹಜ ಸೌಂದರ್ಯದಿಂದ ಕಂಗೊಳಿಸುತ್ತವೆ. ಮೊದಲಗಿತ್ತಿಯರು ತಮ್ಮ ಪ್ರೇಮವನ್ನು ಸುಂದರವಾದ ನುಡಿಗಳಲ್ಲಿ ನೇರವಾಗಿ ಒಡಪುಕಟ್ಟಿ ಅಥವಾ ಒಡಪು ಹಚ್ಚಿ ಹೇಳಿದರೆ, ಪ್ರೌಢಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳು ವ್ಯಂಗ್ಯ, ಕೊಂಕು, ವಕ್ರೋಕ್ತಿಗಳ ಮೂಲಕ ಹೇಳುತ್ತಾರೆ. ಒಡಪುಗಳಲ್ಲಿ ಶೃಂಗಾರ ಹಾಸ್ಯಗಳೆರಡೂ ಸರಿಬೆರೆತಿರುತ್ತವೆ. ತಮ್ಮ ಹೆಂಡಂದಿರು ಅನ್ಯ ಹೆಂಗಳೆಯರೆದುರಿನಲ್ಲಿ ಅಣಕಿಸಿ, ಹಂಗಿಸಿ, ಗೇಲಿಮಾಡಿ ಆಡುವ ಒಡಪುಗಳಿಂದ ರಸಿಕ ಗಂಡಂದಿರು ಅನ್ಯಥಾ ಭಾವಿಸುವುದಿಲ್ಲ, ಆಕ್ರೋಶಗೊಳ್ಳುವುದಿಲ್ಲ. ಅದನ್ನು ಮನೋರಂಜನೆಯಾಗಿ ಸ್ವೀಕರಿಸಿ, ಎಲ್ಲರೊಡನೆ ನಕ್ಕು ನಲಿಯುತ್ತಾರೆ. ತಮ್ಮ ಚೆಲುವೆಯರಾಡುವ ಒಡಪಿನ ಮಾತಿಗೆ ಬೆರಗಾಗಿ, ನೆಟ್ಟನೋಟದಿಂದ ಅವರ ಮಾದಕ ಮುಖ-ಮೈ ನೋಡುತ್ತ 'ರುಂಜುಮಸ್' ಭಾವನೆಯನ್ನು ಅನುಭವಿಸುವರು. ಶುದ್ಧ ಹಳ್ಳಿಗಳಲ್ಲಿ ಈಗಲೂ ವಿವಿಧ ಮಂಗಲ ಪ್ರಸಂಗಗಳಲ್ಲಿ ಒಡಪು ಹಚ್ಚಿ ಹೆಸರು ಹೇಳುವ ಕಾರ್ಯಕ್ರಮ ಇದ್ದೇ ಇರುತ್ತದೆ.

ಶ್ರೀ ಜ್ಯೋತಿ ಹೊಸೂರ ಅವರು ಕಾಲೇಜ ಪ್ರಾಧ್ಯಾಪಕರಾಗಿ ನಾಗರಿಕ ಜೀವನದ ಸಂಸ್ಕಾರ ಪಡೆದವರಾದರೂ ಹಳ್ಳಿಯ ಸಂಸ್ಕೃತಿಯನ್ನೇ ನೆಮ್ಮಿ ಜೀವಿಸುತ್ತಿರುವವರು. ಜನಪದ ಸಾಹಿತ್ಯದ ಸಂಗ್ರಹ-ಸಂಪಾದನೆಯ ಕಾರ್ಯವನ್ನು ಯಾರ ಸಹಾಯವೂ ಇಲ್ಲದೆ, ಸ್ವಯಂ ಸ್ಫೂರ್ತಿಯಿಂದ ಕೈಕೊಂಡವರು. 'ಬೆರಸಿ ಇಟ್ಟೀನಿ ಬೆಲ್ಲ ನೆನಗಡಲಿ' - ಜನಪದ ಗೀತ ಸಂಕಲನದ ಬೆನ್ನ ಹಿಂದೆಯೇ 'ಹೆಸರ ಹೇಳ್ತೀನಿ ಒಡಪಕಟ್ಟಿ' ಎಂಬ ಒಡಪುಗಳ ಸಂಗ್ರಹವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ, ಇವೆರಡು ಹೊಸೂರ ಅವರ ಜನಪದದ ಮೌಲಿಕ ಸಂಪಾದನೆಗಳು.

ಪ್ರಸ್ತುತ ಸಂಗ್ರಹ ಒಡಪುಗಳ ಪರಿಚಯ ಗ್ರಂಥವೂ ಹೌದು. ಪ್ರಸ್ತಾವನೆಯಲ್ಲಿ ಸಂಗ್ರಾಹಕರು ಒಡಪಿನ ಸಂಪೂರ್ಣ ವಿವರ ನೀಡಿದುದು ಅಧ್ಯಯನ ಯೋಗ್ಯವಾಗಿದೆ. ಬೆಳಗಾವಿ ಜಿಲ್ಲೆಯ ಪ್ರಾತಿನಿಧಿಕ ಒಡಪುಗಳ

ಸಂಗ್ರಹವಿದು. ಇಲ್ಲಿ ಹೆಣ್ಣು ಮಕ್ಕಳ ಗಂಡುಮಕ್ಕಳ ಒಡಪುಗಳನ್ನು ಎರಡು ಪ್ರತ್ಯೇಕ ಗುಂಪುಗಳಲ್ಲಿ ವಿಭಾಗಿಸಲಾಗಿದೆ; ಮತ್ತೆ ಅವುಗಳ ವಿಷಯ ವಸ್ತು ಹಾಗು ಭಾವದ ನೆಲೆಯಲ್ಲಿ ಬೇರೆ ಬೇರೆ ಅಧ್ಯಾಯಗಳಲ್ಲಿ ಸಂಯೋಜಿಸಲಾಗಿದೆ. ಹೆಣ್ಣು ಮಕ್ಕಳ ಒಡಪುಗಳು ಮುಂದಿನ ಹನ್ನೆರಡು ಅಧ್ಯಾಯಗಳಲ್ಲಿ ಬಿಚ್ಚಿಕೊಂಡಿವೆ. 'ಸುಲಗಾಯಿ ಮುಂದ ಸುಳದಾಡತಾನ'. ಆಡತಾನ... ನೋಡತಾನ, ಉಣ್ಣಾಂವ ಬಲುಚೆದುರ, ಬಂಗಾರ ಬಾಗಲಾ ತೆರಿ, ಹತ್ತ ಮಂದ್ಯಾಗ ಕುತ್ತ ಹೌಂದ ಅನಸ್ಕೋತಾನ. ಹಿಂತಾ ಗಂಡ ಸಿಗೂದ ಅಪರೂಪ. ನಮ್ಮವಗ ನನಗ ಬಳ ಪರಾ, ಸಾಸಿವಿ ಬಣ್ಣದ ಸೀರಿ, ಸವ್ವಾಸೇರ ಬಂಗಾರ, ನನಗ ಗೊತ್ತ ನನ ಗಂಡನ ಗತ್ತ, ಜಾಣೇನ ಕರ್ಕೊಂಡ ಜಲ್ಮಾ ಮಾಡೂ ಬಿಟ್ಟ, ಹೆಸರ ಕೇಳವರ ಹೆಣ ಎತ್ತಲಿ ಇತ್ಯಾದಿ. ಕೇಳಿದರೆ ಸಾಕು ಶೃಂಗಾರ ಹಾಸ್ಯ ಮೇಲುನೋಟಕ್ಕೆ ಗಮನಸೆಳೆಯುತ್ತಾನೆ. ಹಾಗೆಯೇ ಗಂಡು ಮಕ್ಕಳ ಒಡಪುಗಳ–ನನ್ನ ಹ್ಯಾಣತಿ ಬಲು ಚೆರಕಿ, ಮುತ್ತೋದಿ ನನ ಹ್ಯಾಣತಿ ಮನ್ಯಾಗ ಆದಾಳ, ನಾ ಒಂದ ಹೇಳಾಣಾ ತಾ ಒಂದ ಮಾಡತಾಳ, ಹೆಸರ ಕೇಳಕ್ಕೀನ ಹೆಡಮುರಕಿ ಕಟ್ಟಿ– ಇತ್ಯಾದಿ ವಿಭಾಗಗಳನ್ನು ನೋಡಿದರೂ ಶೃಂಗಾರದ ಕಲ್ಪನೆ ಮೂಡದಿರಲಾರದು. ಹಳ್ಳಿಗರು, ಬಾಯಿ ಮೂಲಕ ಹೇಳಿದ ರೀತಿಯಲ್ಲಿಯೇ (ಯಥಾವತ್ತಾಗಿ) ಲಿಪಿರೂಪ ಕೊಡಲು ಇಲ್ಲಿ ಪ್ರಯತ್ನಿಸಲಾದುದನ್ನು ಗುರುತಿಸಬಹುದು. ಪ್ರದೇಶ ನಿಷ್ಠ ಕೆಲವು ಪದಗಳಿಗೆ ಬೇರೆಯವರಿಗೆ ಅರ್ಥಹೊಳೆಯುವುದು ಕಷ್ಟವಾಗದಿರಲೆಂಬ ಕಾರಣದಿಂದ ಶಬ್ದಕೋಶ ಮತ್ತು ಟಿಪ್ಪಣಿ ಕೂಡ ಕೊಟ್ಟಿದ್ದಾರೆ. ಆದರೆ, ಇಲ್ಲಿಯೂ ಕೂಡ ಕ್ಷೇತ್ರಕಾರ್ಯದ ಅನುಭವಗಳನ್ನು ಹೇಳದಿರುವುದು ಆಶ್ಚರ್ಯಕರವಾಗಿದೆ.

'ಒಡಪುಗಳ ಸಂಗ್ರಹ, ಸಂಯೋಜನೆ, ಅಭ್ಯಾಸ, ಸಾಹಿತ್ಯ ದೃಷ್ಟಿಯಿಂದ ಮಾತ್ರ ಮುಖ್ಯವಲ್ಲ. ಸಮಾಜವಿಜ್ಞಾನ, ಮನೋವಿಜ್ಞಾನ, ಭಾಷಾವಿಜ್ಞಾನಗಳ ದೃಷ್ಟಿಯಿಂದಲೂ ಅಷ್ಟೇ ಮುಖ್ಯವೆಂಬುದನ್ನು ಅರಿತು ಇಂಥ ಸಂಗ್ರಹಗಳನ್ನು ಕನ್ನಡಿಗರು ಬರಮಾಡಿಕೊಳ್ಳಬೇಕಾಗಿದೆ' ಎನ್ನುವ ಹೊಸೂರರವರ ಅಭಿಪ್ರಾಯ

ಸಮುಚಿತವಾದುದು. ಇಂಥ ಜಾನಪದಾಸಕ್ತರಿಂದಲೇ ಜಾನಪದ ಸಂಪತ್ತಿನ ಸಂಗ್ರಹ, ಸಂಯೋಜನ, ಪ್ರಕಟನ ಸಾಧ್ಯ. ಜಾನಪದ ಸಾಹಿತ್ಯದ ಒಡಪುಗಳ ವಿರಳ ಸಂಗ್ರಹದಲ್ಲಿ ಅಪರೂಪದ ಸಂಗ್ರಹವಿದು. ಒಂದೆಡೆ ವಿಪುಲ ಸಂಖ್ಯೆಯಲ್ಲಿ ಒಡಪುಗಳು ಪ್ರಕಟಗೊಳ್ಳುತ್ತಿರುವುದು ಇದೇ ಮೊದಲೆಂದು ತೋರುತ್ತದೆ. ಇದು ಧಾರವಾಡ ಕ.ವಿ.ವಿ. ಕನ್ನಡ ಎಂ.ಎ. ತರಗತಿಯ ಜಾನಪದ ವಿಷಯದ ಪಠ್ಯ ಪುಸ್ತಕವಾಗಿ ಆಯ್ಕೆಗೊಂಡಿದ್ದುದು ಸ್ಮರಣೀಯ. ೧೯೭೪ರಲ್ಲಿ ಈ ಸಂಕಲನ ಎರಡನೇ ಮುದ್ರಣ ಕೂಡ ಕಂಡಿದೆ. ಇವೆಲ್ಲ ಈ ಸಂಗ್ರಹದ ಮಹತ್ವವನ್ನು ಸಾರುತ್ತವೆ.

'ಶ್ರೀ ಹೊಸೂರ ಅವರು ಮೊದಲ ಮಾರ್ಗದರ್ಶಕರಾಗಿ ಈ ಸಂಕಲವನ್ನು ಪ್ರಕಟಿಸುವ ಪ್ರಶಂಸನೀಯ ಕಾರ್ಯವನ್ನು ಮಾಡಿದ್ದಾರೆ. ಇವರ ಈ ಕಾರ್ಯ ಬೇರೆ ತರುಣ ಕಾರ್ಯಕರ್ತರನ್ನು ಜನಪದ ಸಾಹಿತ್ಯ ಶೋಧನೆ, ಸಂಗ್ರಹಗಳ ಕಾರ್ಯರಂಗಕ್ಕೆಳೆಯುವುದೆಂದು' ಪ್ರಸ್ತಾವನೆಯಲ್ಲಿ ಬೆಟಗೇರಿ ಕೃಷ್ಣ ಶರ್ಮರು ನಂಬಿಕೆ ವ್ಯಕ್ತಪಡಿಸಿದುದು ಸುಳ್ಳಾಗಲಿಲ್ಲ. ಇವರ ನಂತರದ ಕೆಲವರು ಸಂಗ್ರಹಕರು, ಈ ಕೃತಿಯ ಸಂಗ್ರಹಣೆಯ ಬೆಳಕಿನಲ್ಲಿಯೇ ತಮ್ಮ ಒಡಪುಗಳನ್ನು ಸಂಗ್ರಹಿಸಿದುದುಂಟು.

ಜಾನಪದ ಉಪಾಸನೆ

ಜ್ಯೋತಿ ಹೊಸೂರ ಅವರು ಜನಪದ ಪರಿಸರದಲ್ಲಿ ಹುಟ್ಟಿ ಬೆಳೆದವರು. ಇವರಿಗೆ ಜಾನಪದದ ನಂಟು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಅಂಟಿಕೊಂಡಿತು. ಐದನೇ ತರಗತಿಯಲ್ಲಿ ಓದುತ್ತಿದ್ದಾಗ, ಬೆಂಗಳೂರಿನ 'ಪ್ರಜಾಮತ' ವಾರಪತ್ರಿಕೆಗೆ ಇವರು ಕೆಲವು ಒಗಟುಗಳನ್ನು ಕಳಿಸಿದ್ದರು. ಅವು ಅದರಲ್ಲಿ ಪ್ರಕಟವಾದಾಗ (೧೯೫೦) ತುಂಬ ನಲಿದವರು. ಹೀಗೆ, ಎಳವೆಯಲ್ಲಿಯೇ ಇವರಿಗೆ ಜಾನಪದದ ಒಲವು ಮೂಡಿತು. ಮುಂದೆ ೧೯೬೯-೭೦ರ ಸಂದರ್ಭದಲ್ಲಿ ಕನ್ನಡ ಎಂ.ಎ. ಓದುವಾಗ ಜಾನಪದದ ವಿಶೇಷ ಅಭ್ಯಾಸ ಮಾಡುವ ಅವಕಾಶ ಇವರಿಗೆ ದೊರೆತಿತು. ಸ್ನಾತಕೋತ್ತರ

ಪದವಿಯ ನಂತರದ ಒಂದು ದಶಕದ ಅವಧಿಯಲ್ಲಿ ಇವರು ಜನಪದದ ಹಲವು ಲೇಖನಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ/ಪ್ರಸಂಗಗಳಲ್ಲಿ ಬರೆದರು. ಅವುಗಳಲ್ಲಿ ಎಂಟನ್ನು ಆಯ್ದು 'ಜನಪದ ಉಪಾಸನೆ' ಹೆಸರಿನಿಂದ ಗ್ರಂಥರೂಪದಲ್ಲಿ ತಮ್ಮ 'ಕಾಲಗತಿ' ಪ್ರಕಾಶನದಡಿಯಲ್ಲಿ ೧೯೮೧ರಲ್ಲಿ ಪ್ರಕಟಿಸಿದ್ದಾರೆ.

ಇದರಲ್ಲಿಯ ಮೊದಲ ಲೇಖನ 'ಕನ್ನಡ ಜನಪದ ಸಾಹಿತ್ಯದ ವಿಮರ್ಶಾ ಕೃಷಿ' ಧಾರವಾಡದಲ್ಲಿ, ಕ.ವಿ.ವಿ. ಹಮ್ಮಿಕೊಂಡ ಮೊಟ್ಟಮೊದಲ ಅಖಿಲ ಕರ್ನಾಟಕ ಜಾನಪದ ಸಮ್ಮೇಲನದ ವಿಚಾರಸಂಕಿರಣದ ಗೋಷ್ಠಿಯೊಂದರಲ್ಲಿ ಮಂಡಿಸಿದ್ದು. ಜನಪದ ಸಾಹಿತ್ಯದ ವಿಮರ್ಶೆಯ ಕೃಷಿ ಸಾಗಿ ಬಂದಿರುವ ಕಾಲಾವಧಿಯನ್ನು ಅಭ್ಯಾಸದ ಅನುಕೂಲಕ್ಕಾಗಿ ೧.ಆರಂಭಕಾಲ (೧೯೨೦-೧೯೫೦) ೨. ನಡುಗಾಲ (೧೯೫೧-೧೯೬೫) ಮತ್ತು ಹೊಸ ಕಾಲ (೧೯೬೬-೧೯೭೩) ಎಂಬುದಾಗಿ ಮೂರು ಹಂತಗಳಲ್ಲಿ ವಿಭಾಗಿಸಿಕೊಂಡು ಪ್ರತಿಪಾದನೆ, ಪ್ರಶಂಸೆ, ಚಿಕಿತ್ಸಕತೆ - ಇವು ಕ್ರಮವಾಗಿ ಒಂದೊಂದು ಹಂತದ ವಿಮರ್ಶೆಯಲ್ಲಿ ಅಭಿವ್ಯಕ್ತವಾಗಿರುವ ಪ್ರಧಾನ ಅಂಶವೆಂಬುದನ್ನು ಗಮನಿಸಬಹುದೆಂದು ಸೂಚಿಸುತ್ತದೆ. ಜನಪದ ವಿಮರ್ಶಾಕೃಷಿಯನ್ನು ನಾಲ್ಕು ನೆಲೆಗಳಲ್ಲಿ ಗುರುತಿಸುವ ಪ್ರಯತ್ನ ಮಾಡುತ್ತಾರೆ. ಬರಹ, ಭಾಷಣ ಮತ್ತು ಮುನ್ನುಡಿ ಇತ್ಯಾದಿ ಹೆಸರಿನಿಂದ ಬಂದ ಲೇಖನಗಳ ವಿಮರ್ಶಾರೂಪ; ಭಾಷಣ, ಬರೆಹ, ಮುನ್ನುಡಿ ಸಂಗ್ರಹಗೊಂಡು ಗ್ರಂಥರೂಪದಲ್ಲಿ ಬಂದ ವಿಮರ್ಶೆ, ಜನಪದ ಸಾಹಿತ್ಯವನ್ನು ಕುರಿತು ಬಂದ ದೀರ್ಘ ಪ್ರಬಂಧ/ಮಹಾಪ್ರಬಂಧಗಳ ರೂಪದ ವಿಮರ್ಶೆ ಮತ್ತು ಜನಪದ ಸಂಕಲನ ಗ್ರಂಥಗಳ ಪತ್ರಿಕಾ ವಿಮರ್ಶೆ ಎಂದು, ಒಂದೊಂದು ಹಂತದಲ್ಲಿ ಸೇರಬಹುದಾದ ವಿಷಯ-ಕೃತಿಗಳ ಮೇಲೆ ಕಣ್ಣಾಡಿಸುವುದರ ಮೂಲಕ 'ಕನ್ನಡ ಜನಪದ ಸಾಹಿತ್ಯದ ವಿಮರ್ಶಾ ಕೃಷಿ ಲೇಖವನ್ನು ಬರೆಯಲು ಪ್ರಯತ್ನಿಸಿದ್ದಾರೆ. ಕನ್ನಡ ಜಾನಪದ ಸಾಹಿತ್ಯಾಧ್ಯಯನದ ಆರಂಭದಿಂದ (೧೯೨೦) ಈ ವರೆಗೆ

(೧೯೭೩) ಜನಪದದ ಮೇಲೆ ಬಂದ ಬರೆಹಗಳನ್ನೆಲ್ಲಾ ಅವಲೋಕಿಸಿ ತಮ್ಮ ಲೇಖನಕ್ಕೆ ಸಾಕಷ್ಟು ನ್ಯಾಯ ಒದಗಿಸಲು ಲೇಖಕರು ಪ್ರಯತ್ನಿಸಿದ್ದಾರಾದರೂ ಸಫಲವಾಗಿಲ್ಲ. ಕಾರಣ ಅವರೇ ತಿಳಿದುಕೊಂಡಂತೆ 'ವಿಮರ್ಶೆಯೆಂದರೆ ಕೃತಿಯ ಮೌಲ್ಯಮಾಪನೆಯ ಪ್ರಯತ್ನ'. ಈ ಅರ್ಥದಲ್ಲಿ ಜನಪದ ಸಾಹಿತ್ಯದ ಮೌಲ್ಯಮಾಪನೆಯ ಕಾರ್ಯ ಕೈಗೊಂಡು ಯಾವೊಂದು ಲೇಖನವೂ ಯಶಗಳಿಸಿಲ್ಲ ಎಂಬ ಅರಿವು ಲೇಖಕರಿದ್ದಾಗ್ಯೂ 'ಜನಪದ ಸಾಹಿತ್ಯದ ವಿಮರ್ಶಾಕೃತಿ' ಎನ್ನುವ ದೊಡ್ಡ ಹೆಸರನ್ನಿಟ್ಟುಕೊಂಡು ಬರೆಯಹೊರಟುದು ಆಶ್ಚರ್ಯಕರವಾಗಿದೆ. ಇದರ ಬದಲಾಗಿ 'ಕನ್ನಡ ಜನಪದ ಸಾಹಿತ್ಯಾಧ್ಯಯನ' ಎಂಬ ಹೆಸರನ್ನಿಟ್ಟುಕೊಂಡು, ಅಂದಿನಿಂದ ಇಂದಿನವರೆಗೆ ಅದರ ಹೆಜ್ಜೆ ಗುರುತುಗಳನ್ನು ಗುರುತಿಸಬಹುದಾಗಿತ್ತು. ಪ್ರಾಸಂಗಿಕವಾಗಿ, ವಿಮರ್ಶೆಯ ನೆಲೆಗಳೇನಾದರೂ ಕಂಡುಬಂದರೆ ಅಲ್ಲಿಯೇ ಸಂಗ್ರಹಿಸಬಹುದಾಗಿತ್ತು. ಲೇಖನದ ಕೊನೆಯಲ್ಲಿ ಹೊಸೂರ ಅವರ ಹೇಳುತ್ತಾರೆ –'ಭವಿಷ್ಯತ್ತಿನಲ್ಲಿ ಬರಬೇಕಾಗಿರುವ ವೈವಿಧ್ಯಪೂರ್ಣವಾದ ವ್ಯವಸ್ಥಿತವಾದ ಮತ್ತು ಸಮತೂಕದ ವಿಮರ್ಶೆಗೆ ತಕ್ಕ ಹಿನ್ನೆಲೆ ಈಗ ನಿರ್ಮಾಣವಾಗಿದೆ' ಎಂದು. ಇದು ಗಮನಿಸುವಂಥದು. ಈಗ ಜನಪದವನ್ನು ಕುರಿತು ಹೊಸಹೊಸ ಅಧ್ಯಯನಗಳು, ಸಂಶೋಧನೆಗಳು ನಡೆದಿವೆ; ತಕ್ಕಮಟ್ಟಿಗೆ ವಿಮರ್ಶೆಯ ಕಾರ್ಯವೂ ನಡೆದಿದೆ ಎನ್ನುವಾಗ, ಜನಪದವನ್ನು ಕುರಿತ 'ಪರಿಶುದ್ಧ ವಿಮರ್ಶೆ' ಇನ್ನೂ ಬರಬೇಕಾಗಿದೆ ಎಂಬುದನ್ನು ಲಕ್ಷಿಸಬೇಕು. ಜಾನಪದಕ್ಕೆ ಅದರದೆ ಆದ ವಿಮರ್ಶಾ ಮಾನದಂಡಗಳನ್ನು, 'ಜಾನಪದ ಕಾವ್ಯ ಮೀಮಾಂಸೆ' (ಎಲ್ಲರೂ ಒಪ್ಪುವ) ಯನ್ನು ರೂಪಿಸಬೇಕಾಗಿದೆ. ಆದರೂ ವೈಯಕ್ತಿಕ ನೆಲೆಯಲ್ಲಿ ಕೆಲವರು ವಿದ್ವಾಂಸರು ಜನಪದ ಸಾಹಿತ್ಯ ವಿಮರ್ಶೆಯನ್ನು ಮಾಡಿದ್ದಾರೆ. ಅಂಥವರಲ್ಲಿ ಗಿರಡ್ಡಿ ಗೋವಿಂದರಾಜ, ಎಂ. ಚಿದಾನಂದ ಮೂರ್ತಿ, ಎಂ.ಎಂ. ಕಲುಬುರ್ಗಿ ಪ್ರಮುಖರು. ಉತ್ತರ ಕರ್ನಾಟಕದಲ್ಲಿ ಜ್ಯೋತಿ ಹೊಸೂರ, ಎಂ. ಎಸ್. ಲಠ್ಠೆ, ಬಸವರಾಜ ಮಲಶೆಟ್ಟಿ, ಶ್ರೀರಾಮ ಇಟ್ಟಣ್ಣವರ, ಸಿ.ಕೆ. ನಾವಲಗಿ ಇವರನ್ನು ಹೆಸರಿಸಬಹುದೆಂದು ತೋರುತ್ತದೆ.

'ಗ್ರಂಥಸ್ಥ ಗಾದೆಗಳು', 'ಕನ್ನಡದ ವಾಗ್ರೂಢಿಗಳು' ಮತ್ತು 'ಜೇಂಗೊಡ' ಇವು (ಕುರಿತು) 'ಕರ್ನಾಟಕ ಭಾರತಿ' ತ್ರೈಮಾಸಿಕದಲ್ಲಿ ಪ್ರಕಟವಾದ ವಿಮರ್ಶೆಗಳೆಂದು ಲೇಖಿಕ ಜ್ಯೋತಿ ಹೊಸೂರ ಅವರೇ ಹೇಳಿಕೊಂಡಿದ್ದಾರೆ. ಅದು ಅರ್ಥಪೂರ್ಣವೂ ಇದೆ.

ಶ್ರೀ ಎಚ್.ಎಸ್. ಅಚ್ಚಪ್ಪನವರು ಕನ್ನಡ ಸಾಹಿತ್ಯದ ಆದಿಗ್ರಂಥ ಕವಿರಾಜಮಾರ್ಗದಿಂದ ಮೊದಲ್ಗೊಂಡು ಇಪ್ಪತ್ತನೆಯ ಶತಮಾನದ ಮುದ್ದಣ್ಣನ ರಾಮಾಶ್ವಮೇಧದವರೆಗಿನ ಸುಮಾರು ೧೩೦ ಪ್ರಮುಖ ಕವಿಗಳ ಸುಮಾರು ೧೬೫ ಕೃತಿಗಳನ್ನು ಅಭ್ಯಸಿಸಿ, ಅವುಗಳಿಂದ ಸುಮಾರು ೧೦,೦೦೦ ಗಾದೆಗಳನ್ನು ಹೆಕ್ಕಿ ತೆಗೆದು 'ಗ್ರಂಥಸ್ಥಗಾದೆಗಳು' ಎಂಬ ಹೆಸರಿನಿಂದ ಪ್ರಕಟಿಸಿದ ಕೃತಿಯ ವಸ್ತುನಿಷ್ಠ ವಿಮರ್ಶೆಯನ್ನು ಮಾಡಿರುವುದನ್ನು ನೋಡಿದರೆ, ಇವರೊಬ್ಬ ಖಂಡಿತ ಸಹೃದಯ ವಿಮರ್ಶಕರೆನ್ನಬಹುದು. ಅಚ್ಚಪ್ಪನವರ 'ಗ್ರಂಥಸ್ಥಗಾದೆಗಳ' ಸಂಪಾದನೆಯ ಸ್ವರೂಪ ವಿವರಣೆಯನ್ನು ಕೊಡುತ್ತ ಲೇಖಿಕರು, ಇವರ ಬೆಟ್ಟದಂಥ ಕಾರ್ಯವನ್ನು ಮೆಚ್ಚಿಕೊಳ್ಳುತ್ತಾರೆ. ಸಂಪಾದಕರ ಸತತಾಭ್ಯಾಸ, ಸಹನಶೀಲತೆ ಮತ್ತು ಪರಿಶ್ರಮಗಳನ್ನು ಎತ್ತಿತೋರಿದ ಹೊಸೂರ ಅವರು ಗಾದೆ–ಕವಿಸೂಕ್ತಿಗಳ ಅಂತರವನ್ನು ಅಚ್ಚಪ್ಪನವರು ಗಮನಿಸದೆ, 'ಕವಿಸೂಕ್ತಿ'ಗಳನ್ನೇ ಗಾದೆಗಳೆಂದು ಗುರುತಿಸಿ ತುಂಬ ಗೊಂದಲಕ್ಕೀಡಾದುದನ್ನು ಪ್ರಮಾಣೀಕರಿಸಿ ತೋರುತ್ತಾರೆ. ಹಳೆಗನ್ನಡ ಕಾವ್ಯಗಳಲ್ಲಿ ಅಂತರ್ಗತವಾದ ಪರಂಪರಾಗತ ಜನಪದ ಗಾದೆಗಳನ್ನು ಅಥವಾ ಈ ಗಾದೆಗಳಿಂದ ಪ್ರೇರಣೆ ಪಡೆದು ಅಥವಾ ಅಲ್ಪಸ್ವಲ್ಪ ರೂಪ ಬದಲಾವಣೆಯೊಂದಿಗೆ ಕವಿ ಕಾವ್ಯಗಳಲ್ಲಿ ಬಳಕೆಗೊಂಡ ಗಾದೆಗಳನ್ನು ಗುರುತಿಸಿ, 'ಗ್ರಂಥಸ್ಥಗಾದೆಗಳು' ಹೆಸರಿನಿಂದ ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂಯೋಜಿಸಿಕೊಡುವಲ್ಲಿ ಲೇಖಕರು ವಿಫಲರಾದುದನ್ನು ತಿಳಿಸುತ್ತ ಗ್ರಂಥಸ್ಥ ಗಾದೆಗಳ ಹೆಸರಿನಲ್ಲಿ ಕನ್ನಡ ಕವಿಸೂಕ್ತಿಗಳನ್ನು ಸಂಗ್ರಹಿಸಿದ ಸಂಪಾದಕರಿಗೆ ಔಚಿತ್ಯ ಪ್ರಜ್ಞೆಯೇ ಇಲ್ಲ. ಅಷ್ಟೇ ಏಕೆ, ಸಂಗ್ರಹಿಸಿದ ಕೆಲವು ಯಾವ ದೃಷ್ಟಿಯಿಂದಲೂ ಸೂಕ್ತಿಗಳಲ್ಲವೆಂದು

ಉದಾಹರಣೆ ಸಹಿತ ವಿವರಿಸಿ, ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಹೊಸೂರ ಅವರು ನಿಷ್ಠುರವಾಗಿ ಬರೆಯುತ್ತಾರೆ. ಜನಪದ ಸಾಹಿತ್ಯ ಕುರಿತು ಒಳ್ಳೆಯ ಕೆಲಸ ಮಾಡಿದವರನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ಆದರೆ, ಅಂಥ ಸಂದರ್ಭದಲ್ಲಿ ಮೇಲಿಂದ ಮೇಲೆ "...... ಅವಕ್ಕಾಗಿ ಶ್ರೀಯುತರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ"... ಕನ್ನಡಿಗರು ಅವರಿಗೆ ಋಣಿಯಾಗಿರಬೇಕು.... ಅವರಿಗೆ ಅಭಿನಂದನೆಗಳು"- ಇಂಥ ಮಾತುಗಳನ್ನು ಲೇಖಕರು ಹೇಳುವುದು ಬೇಸರ ತರಿಸುತ್ತದೆ. ಉಳಿದಂತೆ ತಮಗನ್ನಿಸಿದ್ದನ್ನು ಯಾರ ಭಿಡೆ ಮುರವತ್ತುಗಳಿಗೆ ಒಳಗಾಗದೆ ವ್ಯಕ್ತ ಪಡಿಸುವ ಗುಣವನ್ನು ಹೊಂದಿದ್ದಾರೆ. ಇಂಥವರಿಂದಲೇ ಗಟ್ಟಿಯಾದ ವಿಮರ್ಶೆ ಬೆಳೆಯಲು ಸಾಧ್ಯ. ಈ ನಿಷ್ಠುರ ಸ್ವಭಾವ, ವೈಚಾರಿಕ ನಿಲುವು, ತಿಳುವಳಿಕೆಯ ಸ್ಪಷ್ಟತೆಗಳನ್ನು ರಂಬಾ ಸಾಹಿತ್ಯದ ಓದಿನಿಂದಲೂ ಇವರು ಹೆಚ್ಚಿಸಿಕೊಂಡಂತೆ ತೋರುತ್ತದೆ.

ಪ್ರೊ. ಎಂ. ರಾಜಗೋಪಾಲಾಚಾರ್ಯರು ಬರೆದ 'ಕನ್ನಡದ ವಾಗ್ರೂಢಿಗಳು' ಗ್ರಂಥವನ್ನು ವಿಮರ್ಶೆಗೆ ಎತ್ತಿಕೊಂಡ ಲೇಖಕರು ಕೃತಿಯ ಗುಣಗಳನ್ನು, ಅಲ್ಲೊಂದು ಇಲ್ಲೊಂದು ಕಂಡುಬರುವ ಕೊರತೆಯನ್ನು ಎತ್ತಿ ತೋರಿಸುವುದರ ಮೂಲಕ ಕೃತಿಯ ಮೌಲ್ಯವನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. 'ಕನ್ನಡದ ವಾಗ್ರೂಢಿಗಳು' – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ವಾಗ್ರೂಢಿಗಳೂ ಗ್ರಂಥಗಳಲ್ಲಿ ದೊರೆಯುವ ಇತರ ಕೆಲವು ಪ್ರಯೋಗಗಳೂ ಇರುವ ಪ್ರಾದೇಶಿಕ ಸಂಗ್ರಹ ಕೃತಿಯಿದು. ಕೃತಿಕಾರರು ತಮಗೆ ಸಿಕ್ಕ ವಾಗ್ರೂಢಿಗಳನ್ನು ಸಂಗ್ರಹಿಸಿ ಎಂಟು ಅಧ್ಯಾಯಗಳಲ್ಲಿ ವಿಭಾಗಿಸಿ, ಅಭ್ಯಾಸಕ್ಕೆ ಅನುಕೂಲವಾಗುವಂತೆ ಸಂಪಾದಿಸಿದ್ದಾರೆ. ಪ್ರತಿ ಅಧ್ಯಾಯದ ಪ್ರಾರಂಭಕ್ಕೆ ಚಿಕ್ಕ ವಿವರಣೆ ನೀಡಿ, ಅನಂತರ ಅದರಲ್ಲಿ ಸೇರುವ ವಾಗ್ರೂಢಿಗಳ ಪಟ್ಟಿ ಕೊಡುತ್ತಾರೆ. ಪ್ರಸ್ತುತ ಕೃತಿಯ ಎಂಟೂ ಅಧ್ಯಾಯಗಳನ್ನು ತುಂಬ ತೀಕ್ಷ್ಣವಾಗಿ ಹೊಸೂರವರು ಅವಲೋಕಿಸುತ್ತಾರೆ.

ಕನ್ನಡ ಭಾಷೆಯನ್ನು ಯಾವ ಅಂಶಗಳು ಬೇರೆ ಭಾಷೆಗಳಿಂದ ಪ್ರತ್ಯೇಕಿಸುತ್ತವೆಂಬುದನ್ನು ಗಮನದಲ್ಲಿಟ್ಟುಕೊಂಡು ವಾಗ್ರೂಢಿಗಳನ್ನು ಸಂಗ್ರಹಿಸಿರುವುದನ್ನು, ಸಂಯೋಜಿಸಿರುವುದನ್ನು ಗುರುತಿಸಿದ ಲೇಖಕರು, ಇದು ಸ್ತುತ್ಯಕಾರ್ಯವೆಂದಿದ್ದಾರೆ. ಹಾಗೆಯೇ "..... ಶ್ರೀಯುತರ ಶ್ರದ್ಧಾಪೂರ್ಣತೆಯನ್ನು ನಾವು ಶ್ಲಾಘಿಸಬೇಕು.....ರಾಜಗೋಪಾಲಾಚಾರ್ಯರು ಕನ್ನಡಕ್ಕೆ ಈಗ ಅವಶ್ಯ ಆಗಬೇಕಾದ ಕಾರ್ಯವೊಂದನ್ನು ಮಾಡಿದ್ದಾರೆ..... ಕನ್ನಡಿಗರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಶ್ರೀಯುತರ ಕಾರ್ಯ ಇನ್ನೂ ಹಲವರಿಗೆ ಪ್ರೇರಣೆ ನೀಡಲೆಂದು ಹಾರೈಸುವೆ" ಇತ್ಯಾದಿಯಾಗಿ ಪದೇ ಪದೇ ಬರುವ ಮಾತುಗಳು ಲೇಖಕರ ಸೌಜನ್ಯವನ್ನು, ಪ್ರೋತ್ಸಾಹವನ್ನು ವ್ಯಕ್ತಮಾಡುವಂತಿದ್ದರೂ ಒಂದು ಕೃತಿಯ ವಿಮರ್ಶೆಯ ಸಂದರ್ಭದಲ್ಲಿ ಔಚಿತ್ಯಪೂರ್ಣ ಎನಿಸಲಾರವು; ಅಲ್ಲದೆ ಆಧುನಿಕ ವಿಮರ್ಶೆ, 'ಫಸ್ಟ್ ಪರ್ಸನ್'ದಲ್ಲಿ ಬರೆಯುವುದನ್ನು ಸ್ವಾಗತಿಸುವುದಿಲ್ಲ ಎಂಬುದನ್ನು ಲೇಖಕರು ಗಮನಿಸಬೇಕು. ನವೋದಯದ ಬಹುತೇಕ ಸಾಹಿತಿಗಳಲ್ಲಿ ಆಶೀರ್ವಾದ ರೂಪದ ಈ ಹರಸುವಿಕೆಯನ್ನು ಕಾಣುತ್ತೇವೆ. ಬೆಟಗೇರಿ ಕೃಷ್ಣಶರ್ಮರಿಂದ ಅಥವಾ ಜನಪದ ಜನಾಂಗದವರಿಂದ ಇದು (ಹಾರಯಿಕೆ) ಲೇಖಕರಿಗೆ ಬಳುವಳಿಯಾಗಿ ಬಂದಂತೆ ತೋರುತ್ತದೆ.

ಕಾರವಾರ ಜಿಲ್ಲೆಯ ಹೊನ್ನಾವರ, ಕುಮಟಾ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿಯ ನಾಮಧಾರಿ ಜನಾಂಗದಲ್ಲಿಯ ಹಾಡುಗಳನ್ನು ಶ್ರೀ ಎನ್.ಆರ್. ನಾಯಕ ಅವರು ಸಂಗ್ರಹಿಸಿ, ಸಂಯೋಜಿಸಲಾದ ಕೃತಿ 'ಜೇಂಗೂಡ' ದಲ್ಲಿ ಅವಶ್ಯಕತೆಗಿಂತ ಹೆಚ್ಚು ಭಾಗ ಉಪಭಾಗಗಳನ್ನು ಮಾಡಿಕೊಂಡುದು ಬೇಸರತರಿಸುವುದಲ್ಲದೆ, ಚಿಕ್ಕಚಿಕ್ಕ ಉಪಭಾಗಗಳು ಯಾವುದೇ ನಿರ್ದಿಷ್ಟ ಭಾವ ಮೂಡಿಸುವಲ್ಲಿ ಯಶಸ್ವಿಯಾಗಿಲ್ಲವೆಂದು ತಮ್ಮ ನೇರ ಮಾತುಗಳಲ್ಲಿ ಹೊಸೂರವರು ತಿಳಿಸುತ್ತಾರೆ. ಹಳ್ಳಿಗರ ಜೀವನದ ವಿವಿಧ ಮುಖಗಳ ಪರಿಚಯ ಮಾಡಿಕೊಡುವ ಪದ್ಯಗಳ ಸಂಗ್ರಹವಾದ 'ಜೇಂಗೂಡ' ದಲ್ಲಿ ಹೊಸತನ ತರಲು ಸಂಪಾದಕರು ಹವಣಿಸಿದ್ದಾರೆ. ಈ ಕಾರಣಕ್ಕಾಗಿ ಪ್ರಸ್ತುತ

ಕೃತಿಯನ್ನು 'ಹಾರ್ದಿಕವಾಗಿ ಸ್ವಾಗತಿಸುವೆ' ಎಂದಿದ್ದಾರೆ ಲೇಖಕರು. ಇವರು, ಸ್ವಾಗತಕೋರುವ ಬರೆವಣಿಗೆಯ ರೀತಿಯನ್ನು ಡಾ। ಎಸ್.ಎಂ. ವೃಷಭೇಂದ್ರ ಸ್ವಾಮಿಯವರ ಪ್ರಭಾವದಿಂದ ರೂಢಿಸಿಕೊಂಡಂತೆ ತೋರುತ್ತದೆ. ಭಾಷಾ ಶಾಸ್ತ್ರದ ದೃಷ್ಟಿಯಿಂದ ಜೇಂಗೊಡಕ್ಕಿರುವ ವಿಶಿಷ್ಟ ಸ್ಥಾನವನ್ನು ಹೊಸೂರ ಅವರು ನಿರೂಪಿಸುತ್ತಾರೆ– "…. ಅಂಥ ಸಂಗ್ರಹಗಳು ಶ್ರೀಯುತರಿಂದ ಬೇಗನೆ ಪ್ರಕಟವಾಗಲೆಂದು ಹಾರೈಸುವೆ." ಅಂತೆಯೇ 'ಹೊಸತನದ ಪ್ರಜ್ಞೆಗಾಗಿ, ಪ್ರಯತ್ನಗಳಿಗಾಗಿ ಜೇಂಗೊಡವನ್ನು ತುಂಬುಹೃದಯದಿಂದ ಸ್ವಾಗತಿಸಬೇಕಾಗಿದೆ. ಸಂಪಾದಕರಾದ ಶ್ರೀ ಎಸ್.ಆರ್. ನಾಯಕ ಅವರನ್ನು ಅಭಿನಂದಿಸಬೇಕಾಗಿದೆ' ಎಂಬಂತಹ ನುಡಿಗಳು ವಿಮರ್ಶಕನೊಬ್ಬನಿಂದ ಮೇಲಿಂದ ಮೇಲೆ ಉಕ್ಕಗೊಳ್ಳುವುದು ಸಾಂಪ್ರದಾಯಿಕ ನೆಲೆಯ ವಿಮರ್ಶೆಯನ್ನು ನೆನಪಿಸುತ್ತದೆ. ವೈಚಾರಿಕ ನಿಲುವಿನ ವಿಮರ್ಶಕರಲ್ಲೋರ್ವರಾದ ಜ್ಯೋತಿ ಹೊಸೂರ ಇವರಿಂದ ಇಂಥದ್ದನ್ನು ನಿರೀಕ್ಷಿಸಬಹುದೇ? ಎಂಬ ಕುತೂಹಲವುಂಟಾಗುತ್ತದೆ. ಏನೇ ಆದರೂ ಈ ಮೂರು ಲೇಖನಗಳಲ್ಲಿ ವಿಮರ್ಶೆಯಲ್ಲಿ ಲೇಖಕರ ಭಾಷಾವಿಜ್ಞಾನ ಪಾಂಡಿತ್ಯ ಗಮನಿಸುವಂಥದು.

ಜನಪದರು ದೇವ–ದೇವತೆಗಳಲ್ಲಿ ಭೇದಕಲ್ಪಿಸದೆ, ಸಾಮರಸ್ಯದ ಭಾವದಿಂದ, ಭಕ್ತಿಯಿಂದ ಎಲ್ಲ ದೇವರುಗಳನ್ನು ಪೂಜಿಸಿದವರು, ನೆನಸಿದವರು; ಅವುಗಳೆಲ್ಲ ಅಭಿನ್ನವೆಂದು ಎಂದಿನಿಂದಲೋ ತಿಳಿದು ನಡೆದುಕೊಂಡವರು. ಜನಪದರ ಈ ಶ್ರದ್ಧಾಭಾವನೆಯನ್ನು 'ಜನಪದ ಸಾಹಿತ್ಯದಲ್ಲಿ ದೇವ–ದೇವತಾ ಸಾಮರಸ್ಯ' – ಲೇಖನದಲ್ಲಿ ಜನಪದ ಹಾಡು, ತ್ರಿಪದಿ, ಲಾವಣಿಗಳ ಆಧಾರದಿಂದ ತಿಳಿಯಪಡಿಸುವ ಲೇಖಕ ಹೊಸೂರ ಅವರ ಪ್ರಯತ್ನ ಮೆಚ್ಚುವಂತಹುದು. ಇಂದಿನ ಸಂದರ್ಭಕ್ಕೆ ಅತ್ಯಂತ ಪ್ರಸ್ತುತವಾದ ಈ ಲೇಖನ ವಿಸ್ತಾರವಾದ ಅಧ್ಯಯನದ ಕೊರತೆಯಿಂದಾಗಿ ಪೂರ್ತಿ ತೃಪ್ತಿಯನ್ನು ನೀಡಲಾರದು. ಅಲ್ಲದೆ ಜನಪದ ಹಾಡುಗಳಲ್ಲಿ ಅಡಕಗೊಂಡ ಜನಪದರ ಐಕ್ಯಮತ್ಯದ ಭಾವನೆಗಳ ಅರ್ಥವಿಸ್ತಾರದ ಕೊರತೆಯೂ ಎದ್ದುಕಾಣುತ್ತದೆ.

ಆದರೂ ಜಾತಿ ಧರ್ಮ ದೇವರುಗಳ ಹೆಸರಿನಲ್ಲಿ ಕೋಮಲ ಭಾವನೆಯ ದಳ್ಳುರಿಯಿಂದ ನಲುಗಿಹೋಗುತ್ತಿರುವ ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಸಾಮರಸ್ಯವನ್ನು ಬಿತ್ತುವ ಇಂಥ ಲೇಖನಗಳು ಸ್ವಲ್ಪ ಮಟ್ಟಿಗಾದರೂ ಸಮಾಧಾನ ನೀಡಬಲ್ಲವು ಎಂಬುದರಲ್ಲಿ ಸಂಶಯವಿಲ್ಲ.

ಸಾಮಾಜಿಕ ಜೀವನ ದೃಷ್ಟಿಯಿಂದಲೂ ಜಾನಪದರು ಸಹಾಯ ಸಹಕಾರಗಳಿಂದಲೇ ಬದುಕಿ ಬಾಳಿದವರು; ವ್ಯವಹಾರಿಕ, ಕೃತ್ರಿಮ ಜೀವನ ಅವರದಲ್ಲ ಎಂಬುದನ್ನು ಗ್ರಾಮೀಣ ಜೀವನದ ದಟ್ಟ ಅನುಭವದಿಂದ ಲೇಖಕರು 'ಜಾನಪದದಲ್ಲಿ ಸಹಕಾರ' ಎಂಬ ಲೇಖನದಲ್ಲಿ ಸಾಧಾರವಾಗಿ ಚರ್ಚಿಸಿದ್ದಾರೆ. ಈ ಸಹಕಾರ ಭಾವನೆ ಅವರ ಐಕ್ಯಮತ್ಯಕ್ಕೆ ಕಾರಣವಾಗಿ ವ್ಯಷ್ಟಿಯಲ್ಲಿ ಸಮಷ್ಟಿಯಲ್ಲಿ ಅಗಣಿತ ಕಾರ್ಯ ಮಾಡಲು ಅವರಿಗೆ ಸಾಧ್ಯವಾಗಿದೆ. ಜನಪದ ದೈವೀ ಸಾಮರಸ್ಯ ಒಂದು ರೀತಿಯಲ್ಲಿ ಅವರ ಸಾಮಾಜಿಕ ಸಹಕಾರಕ್ಕೆ ಮೂಲ ನೆಲೆಯೊದಗಿಸಿದುದನ್ನು ಹೊಸೂರ ಅವರು ಪರೋಕ್ಷವಾಗಿ ಧ್ವನಿಸಿದಂತಿದೆ. ಜನಪದ ಸಂಕೃತಿಯಲ್ಲಿ ಸಹಕಾರದ ಪಾತ್ರವನ್ನು : ಅರ್ಥವ್ಯವಸ್ಥೆಯಲ್ಲಿ ಸಹಕಾರ, ಊರ (ಸಮಾಜ) ಕಾರ್ಯಗಳಲ್ಲಿ ಸಹಕಾರ, ಸದಾಚಾರಗಳಲ್ಲಿ ಸಹಕಾರ, ಮತ್ತು ಕೌಟುಂಬಿಕ ಸಮಾರಂಭಗಳಲ್ಲಿ ಸಹಕಾರ ಎಂಬ ನಾಲ್ಕು ಬಗೆಗಳಲ್ಲಿ ಹಾಗೂ ಆ ಒಂದೊಂದು ಬಗೆಯಲ್ಲಿಯೂ ಮತ್ತೆ ನಾಲ್ಕು ಒಳಬಗೆಗಳನ್ನು ಗುರುತಿಸಿಕೊಂಡು ಅವುಗಳನ್ನು ಅವಲೋಕಿಸುವ ಮೂಲಕ ಮಹತ್ವದ ಒಳನೋಟಗಳನ್ನು ತೆರೆದಿಡುವ ಪ್ರಸ್ತುತ 'ಜಾನಪದದಲ್ಲಿ ಸಹಕಾರ' ಮಹತ್ವದ ಲೇಖನ ಎನಿಸಿದೆ.

ಜನಪದ ಸಂಸ್ಕೃತಿಯಲ್ಲಿ 'ಸಹಕಾರ' ತತ್ವದ ಪಾತ್ರವನ್ನು ನಿರೂಪಿಸಿದ ಮೇಲೆ, ಲೇಖನದ ಕೊನೆಯಲ್ಲಿ 'ಜನಪದ ಸಾಹಿತ್ಯದಲ್ಲಿ ಸಹಕಾರ' ಎನ್ನುವ ಚಿಕ್ಕ ವಿಭಾಗ ಮಾಡಿಕೊಂಡು, ಗಾದೆಗಳಲ್ಲಿ ಅಡಗಿದ ಗ್ರಾಮೀಣರ ಸಹಕಾರದ ಭಾವನೆಯನ್ನು ಹುಡುಕಿ ಹೇಳುವುದು ಇಲ್ಲಿ ಅರ್ಥವಿಲ್ಲದ್ದು. ಬೇಕಿದ್ದರೆ, ಗಾದೆಮಾತುಗಳನ್ನು ಬಳಸಿಕೊಂಡು, 'ಜನಪದ ಸಂಸ್ಕೃತಿಯಲ್ಲಿ ಸಹಕಾರ'

ಈ ಲೇಖನವನ್ನು ಗಟ್ಟಿಗೊಳಿಸಿಕೊಳ್ಳಬಹುದಾಗಿತ್ತು. ಜನಪದ ಸಂಸ್ಕೃತಿಯ/ ಜನಪದ ಜೀವನದ ಪ್ರತಿಬಿಂಬವೇ ಜನಪದ ಸಾಹಿತ್ಯ ಎಂಬರಿವಿರುವ ಲೇಖಕರು ಹೀಗೆ ಮಾಡಿದ್ದು ಅಷ್ಟು ಸೂಕ್ತವಲ್ಲ.

ಜಾನಪದ ಜನಾಂಗಿಕ ಅಧ್ಯಯನದ ದೃಷ್ಟಿಯಿಂದ ಈ ಕೃತಿಯ 'ಗೊಂದಲ ಮತ್ತು ಗೊಂದಲಿಗರ ಹಿನ್ನೆಲೆ' ಹಾಗೂ 'ಗೊಂದಲದ ಗೊಂದಲ' ಎಂಬೆರಡು ಲೇಖನಗಳು ಗಮನಾರ್ಹವಾಗಿವೆ, ಗಂಭೀರವಾಗಿವೆ. ಇಲ್ಲಿ ಲೇಖಕರ ಚಿಕಿತ್ಸಕ ಬುದ್ಧಿಯ ಸಂಶೋಧನೆಯನ್ನು ಗುರುತಿಸಬಹುದು. ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಮತ್ತು ಕನ್ನಡ ವಿಶ್ವಕೋಶದ ಆರನೇ ಸಂಪುಟ (ಪುಟ ೫೦೭)ದಲ್ಲಿ 'ಗೊಂದಲಿಗರು ಮೂಲತಃ ಮಹಾರಾಷ್ಟ್ರಕ್ಕೆ ಸೇರಿದವರು' ಎಂದು ಹೇಳಲಾಗಿರುವುದನ್ನು ಸಾರಾಸಗಟಾಗಿ ಅಲ್ಲಗಳೆದು, ಗೊಂದಲ ಮತ್ತು ಗೊಂದಲಿಗರ ಮೂಲವು ಕನ್ನಡ ಭಾಷೆಗೆ ಸಂಬಂಧಿಸಿದ್ದೆಂಬುದಕ್ಕೆ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳ ಆಧಾರವನ್ನು ಕೊಡುತ್ತಾ, ಗೊಂದಲ ಈ ಧಾರ್ಮಿಕ ವಿಧಿ ವಿಧಾನವು ಕನ್ನಡ ಮೂಲದಿಂದ, ಕನ್ನಡ ಮೂಲದವರಿಂದ ಆರಂಭಗೊಂಡುದಾಗಿದೆ. ಆದ್ದರಿಂದ ಗೊಂದಲಿಗರು ಮೂಲತಃ ಕರ್ನಾಟಕದವರಾಗಿದ್ದಾರೆ. ಕನ್ನಡದ 'ಗೊಂದಲ'ವೇ ಮರಾಠಿಯಲ್ಲಿ "ಗೋಂಧಳ' ಆಗಿದೆ. ಪರಿಸ್ಥಿತಿಯ ಒತ್ತಡದಿಂದಾಗಿ ಮರಾಠಿಯ ಪ್ರಭಾವಕ್ಕೊಳಗಾಗಿ ಇಂದು ಅವರು ಮಹಾರಾಷ್ಟ್ರದ ಮೂಲದವರಂತೆ ತೋರುತ್ತಿದ್ದಾರೆ ಎಂದು ತರ್ಕಬದ್ಧವಾಗಿ ಹೊಸ ಶೋಧವನ್ನು ಹೊಸೂರ ಅವರು ಮುಂದಿಟ್ಟಿದ್ದಾರೆ. ಇಲ್ಲಿಯ ಕೊನೆಯ ಲೇಖನ, 'ಗೊಂದಲದ ಗೊಂದಲ'ದಲ್ಲಿಯ ಜ್ಯೋತಿ ಹೊಸೂರ ಅವರ ಗೊಂದಲ ಪದದ ವ್ಯುತ್ಪತ್ತಿ ವಿಚಾರ, ಗೊಂದಲದ ಬಗೆಗಿನ ಚಿಂತನ–ಮಂಥನ; ವಾದ–ವಿವಾದ; ನಿರೂಪಣೆ ರೀತಿ, ಶ್ರದ್ಧೆ–ತಾಳ್ಮೆಗಳನ್ನು ನೋಡಿದರೆ, ಒಬ್ಬ ನಿಜವಾದ ಸಂಶೋಧಕ–ವಿಮರ್ಶಕನಲ್ಲಿರಬೇಕಾದ ಎಲ್ಲ ಅರ್ಹತೆಗಳನ್ನು ಹೊಂದಿದವರೆಂಬುದರಲ್ಲಿ ಎರಡು ಮಾತಿಲ್ಲ.

ಒಟ್ಟಿನಲ್ಲಿ, ಜ್ಯೋತಿ ಹೊಸೂರ ಅವರ ಜಾನಪದದ ವಿಭಿನ್ನ ನೆಲೆಗಳ ಆಸಕ್ತಿಯನ್ನು ಗಂಭೀರವಾಗಿ ಬಿಚ್ಚಿ ತೋರುವ 'ಜಾನಪದ ಉಪಾಸನೆ' ಹೊಸ ತಲೆಮಾರಿನ ಜಾನಪದ ಆಸಕ್ತರು, ಅಧ್ಯಯನಕಾರರು, ಸಂಶೋಧಕರು ಪರಾಮರ್ಶಿಸಬೇಕಾದ ಅಷ್ಟೇ ಏಕೆ ಉಪಾಸಿಸಬೇಕಾದ ಗ್ರಂಥ.

ಜಾತಿ-ಗಾರರ ಜಾತಕ

ಇದು ಹೊಸೂರ ಅವರ 'ಕಾಲಗತಿ' ಪ್ರಕಾಶನದ ಆಶ್ರಯದಲ್ಲಿ ಪ್ರಕಟಗೊಂಡ ಉತ್ತರ ಕರ್ನಾಟಕದ ಜನಪದ ವೃತ್ತಿಕಲಾವಿದ ಜಾತಿಯೊಂದನ್ನು ಕುರಿತ ಅವರ ಸಂಶೋಧನ ಕೃತಿ. ಕನ್ನಡ ಜಾನಪದ ಮತ್ತು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಅಭ್ಯಾಸಿಗಳಿಗೆ ಜಾತಿಗಾರರ ಕುರಿತು ಅತ್ಯಂತ ಉಪಯುಕ್ತ ವಿಷಯ-ವಿವರ ಈ ಗ್ರಂಥದ ಮೂಲಕ ಮೊದಲಿಗೆ ಬೆಳಕು ಕಂಡಿರುವುದು ಗಮನೀಯ. ಜಾತಿಗಾರರು ಹಿಂದು-ಇಂದು ಮುಂದನ್ನು ಕುರಿತು ಸ್ವಾನುಭವ-ಸಂದರ್ಶನ-ವಿಚಾರವಿನಿಮಯ-ಮಾಹಿತಿ ಸಂಗ್ರಹ - ಹಳಗನ್ನಡ ಕಾವ್ಯಗಳ ಉಲ್ಲೇಖಿಗಳ ಸಹಾಯದಿಂದ 'ಜಾತಿಗಾರರ ಜಾತಕ' ಪುಸ್ತಕದಲ್ಲಿ ವಿವೇಚಿಸಲಾಗಿದೆ. ಜಾತಿಗಾರರ ಜೀವನಗತಿಯಲ್ಲಿಯ ಸ್ಥಿತ್ಯಂತರಗಳನ್ನು ಸಂಶೋಧನೆ ಮಾಡಲಾಗಿದೆ.

ಜಾತಿಗಾರರು ಗ್ರಾಮೀಣ ವೃತ್ತಿ ಕಲಾವಿದರು. ವಿವಿಧ ಬಗೆಯ ವಿಡಂಬಕ ಸೋಗು ಹಾಕುವುದು, ಲಾಗಕಸರತ್ತುಗಳ ಪ್ರದರ್ಶನ ಮಾಡುವುದು ಇವರ ಕಲೆಗಾರಿಕೆಯ ಕಾಯಕಗಳು. ಇಂದಿಗೂ ಈ ವೃತ್ತಿಗಳು ಇವರಲ್ಲಿದ್ದರೂ ಬಹಳಷ್ಟು ಜನರು ಬೇರೆ ವೃತ್ತಿಗಳಿಗೆ ಇಳಿದಿದ್ದಾರೆ. ಇವರು ಅವಲಂಬಿಸಿರುವ ಮತದಲ್ಲಿಯೂ ಸ್ಥಿತ್ಯಂತರವಾಗಿದೆ. ಹಿಂದೆ ಹಿಂದೂಗಳಾಗಿದ್ದವರು ಈಗ ಮುಸ್ಲಿಂ ಮತಸ್ಥರು. ಇವೆಲ್ಲ ವಿಷಯಗಳ ಚರ್ಚೆ ಮತ್ತು ಇವರ ಇಂದಿನ ಬದುಕಿನ ಬಗೆ, ಬಾಳಬಟ್ಟೆಯ ಚಿತ್ರಣವೇ ಈ ಗ್ರಂಥದಲ್ಲಿರುವ ವಿಷಯ. ಜಾತಿಗಾರರನ್ನು ಕುರಿತು ವ್ಯಾಪಕ ಅಧ್ಯಯನ ಕೈಗೊಳ್ಳುವವರಿಗೆ ಪ್ರಸ್ತುತ ಕೃತಿ

ನಿಜವಾಗಿಯೂ ದಿಕ್ಸೂಚಿ. ಡೊಂಬರು ಮತ್ತು ಪಗರಣಿಗರು – ಈ ಗ್ರಾಮೀಣ ಕಲಾವಿದರ ಜೊತೆಗೆ ಜಾತಿಗಾರರನ್ನು ತೌಲನಿಕವಾಗಿ ಅಭ್ಯಾಸಮಾಡುವ ಅಗತ್ಯವಿದೆ. ಈ ಬಗೆಯ ಅಧ್ಯಯನಕ್ಕೂ ಪ್ರಸ್ತುತ ಕೃತಿ–ನೆರವಾಗುವುದರಲ್ಲಿ ಸಂದೇಹವಿಲ್ಲ.

'ಜಾತಿಗಾರರ ಜಾತಕ' ಗ್ರಂಥ – 'ಜಾತಿಗಾರರ ಗತಿ ಸ್ಥಿತಿ'– ಹಾಗೂ 'ಜಾತಿಗಾರರ ಬಾಳಬಟ್ಟೆ' ಎರಡು ಪ್ರಮುಖ ವಿಭಾಗಗಳಲ್ಲಿ ತೆರೆದುಕೊಂಡಿದೆ. 'ಜಾತಿಗಾರರ ಗತಿ ಸ್ಥಿತಿ' ಮೊದಲನೇ ವಿಭಾಗದಲ್ಲಿ ಪ್ರಸ್ತಾವನೆ, ವಾಸಿಸುವ ಪ್ರದೇಶ, ಭಾಷೆ ಮತ್ತು ಮತ, ಮತಾಂತರ, ಪೂರ್ವೇತಿಹಾಸಕ್ಕೆ ಮುನ್ನ ಜಾತಿಗಾರರ ಪೂರ್ವೇತಿಹಾಸ ಎಂಬ ಒಳವಿಭಾಗಗಳನ್ನು ಮಾಡಿಕೊಂಡು ವಿಷಯ ವಿವೇಚನೆ ಮಾಡಿದರೆ 'ಜಾತಿಗಾರರ ಬಾಳಬಟ್ಟೆ' ಎಂಬ ಎರಡನೇ ವಿಭಾಗದಲ್ಲಿ – ಹಬ್ಬ ಹರಿದಿನಗಳ ಆಚರಣೆ, ಶುಭಾಶುಭ ಶಕುನ ಮತ್ತು ನಂಬುಕೆ, ಸಂಸ್ಕಾರಗಳು, ಕಸಬುಗಳು, ಲಾಗ–ಕಸರತ್ತುಗಳು, ವಿಡಂಬಕ ಸೋಗುಗಳು ಸಿದ್ಧಿಕ ಸಿದ್ಧಿಯ ಸೋಗು, ಸಿದ್ಧಿಕ ಸಿದ್ಧಿ ಸೋಗಿನ ಓನ್ನಲೆ, ಮುದುಕಿಯ ಸೋಗು, ಸೆಟ್ಟೆಯ ಸೋಗು, ಜೀವನ ವಿಧಾನ–ಸ್ವಭಾವ, ಸಾಮಾಜಿಕ ಸ್ಥಾನಮಾನ, ಹಿಂದುಳಿದವರಲ್ಲಿ ಹಿಂದುಳಿದವರು, ವೈಜ್ಞಾನಿಕತೆಯ ಆಘಾತ, ಬದಲಾವಣೆಯ ತಿರುವಿನಲ್ಲಿ, ಮುಕ್ತಾಯಕ್ಕೆ ಮುನ್ನ – ಇಷ್ಟು ಒಳವಿಭಾಗಗಳಲ್ಲಿ ಜಾತಿಗಾರರ ಜೀವನ ಚಿತ್ರವನ್ನು ಶೋಧನ ನೆಲೆಯಲ್ಲಿ ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. 'ಜಾತಿಗಾರರ ಜಾತಕ' – ಕೃತಿ ಜನಾಂಗಿಕ ಅಧ್ಯಯನಕ್ಕೆ ಮಾರ್ಗದರ್ಶಿ, ಮಾದರಿ ಎಂದರೆ ಅತಿಶಯೋಕ್ತಿಯಾಗಲಾರದು.

ಜಾನಪದ ಕುರಿತು

ಪ್ರಿನ್ಸಿಪಾಲ ಜ್ಯೋತಿ ಹೊಸೂರರವರು ತಮ್ಮ 'ಜಾನಪದ ಮಂಟಪ'ದ ಆಶ್ರಯದಲ್ಲಿ ತಮ್ಮ 'ಜಾನಪದ ಕುರಿತು' – ಆರು ಪ್ರಬಂಧಗಳ ಸಂಕಲನವನ್ನು

ಪ್ರಕಟಿಸಿದ್ದಾರೆ. ಕಾಲಾವಕಾಶದಿಂದ, ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಾಸಂಗಿಕವಾಗಿ ಬರೆದ ಪ್ರಬಂಧಗಳಿವಾಗಿರುವುದರಿಂದ ಸಹಜವಾಗಿ ಉತ್ತಮ ಗುಣಮಟ್ಟ ಹೊಂದಿವೆ. ಜಾನಪದ ಕಲೆ, ಆಟ, ಸಾಹಿತ್ಯಗಳಿಗೆ ಸಂಬಂಧಿಸಿದ ಉಪಯುಕ್ತ ಮಾಹಿತಿ ಇಲ್ಲಿಯ ಲೇಖನಗಳಲ್ಲಿದೆ. ಜಾನಪದ ಅಭ್ಯಾಸಿಗಳಿಗೆ ಉಪಯುಕ್ತ ಗ್ರಂಥವಿದು. ಈ ಕೃತಿಯಲ್ಲಿ 'ಬೆಳಗಾವಿ ಜಿಲ್ಲೆಯ ಜನಪದ ಕಲೆಗಳ'ನ್ನು ಒಂದೂ ಬಿಡದಂತೆ ಉಲ್ಲೇಖಿಸಿ, ಅವುಗಳ ಸಂಕ್ಷಿಪ್ತ ರೂಪ-ಸ್ವರೂಪವನ್ನು ನೀಡುವುದರ ಮೂಲಕ, ಜನಪದ ಕಲೆಗಳ ಹಿನ್ನೆಲೆಯಲ್ಲಿ ಜಿಲ್ಲೆಯ ವೈಶಿಷ್ಟ್ಯವನ್ನು ಹೊಸೂರರವರು ಎತ್ತಿ ಹೇಳಿದ್ದಾರೆ. ಜಿಲ್ಲೆಯ ಜನಪದ ಕಲೆಗಳನ್ನು ಕುರಿತು ವಿಶೇಷ ಅಧ್ಯಯನ ಕೈಗೊಳ್ಳುವವರಿಗೆ ಈ ಲೇಖನ ದಿಕ್ಸೂಚಿಯಾಗಿದೆ. ಜಿಲ್ಲೆಯ ಜನಪದ ಕಲೆಗಳ ಕೇವಲ ಸಮೀಕ್ಷೆ ಈ ಲೇಖನವಲ್ಲ. ಲೇಖಕರ ಆಳವಾದ ಅಧ್ಯಯನ, ವಸ್ತುನಿಷ್ಠ ವಿಮರ್ಶೆಯನ್ನು ಹೊರಸೂಸುವ ಶೋಧಾತ್ಮಕ ಲೇಖನ. ಆಧಾರ ಸಹಿತವಾದ ಜನಪದ ಕಲೆಗಳನ್ನು ಕುರಿತು ಅವರು ನೀಡುವ ವಿವರಣೆ ಅರ್ಥಪೂರ್ಣವಾದುದು. ಜನಪದ ಗಾಯನ ಅಥವಾ ಹಾಡುಗಾರಿಕೆ, ಜನಪದ ವೃತ್ತಿಗಳು, ವಾದ್ಯಕಲೆಗಳು (ವಾದ್ಯಮೇಳಗಳು), ಜನಪದ ಮನೋರಂಜನೆಗಳಾದ ಪಗರಣ (ಸೋಗು) ಇತ್ಯಾದಿ, ವೃತ್ತಿ ಮನೋರಂಜನೆಗಳಾದ ದುರಗಮುರಿಗಿ, ಗಂಗೆಗೌರಿ, ಮಂಗ-ಕರಡಿ, ಬಸವ (ಕೋಲೆ ಬಸವ), ಡೊಂಬರಾಟ, ಜಾತಿಗಾರರು, ಗೊಂದಲಿಗರು ಹಾಗೂ ಜನಪದ ರಂಗ ಕಲೆಗಳಾದ ಬಯಲಾಟ, ಯಕ್ಷಗಾನ, ದೊಡ್ಡಾಟ, ಡಪ್ಪಿನಾಟ ಮುಂತಾದವುಗಳನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಖಚಿತವಾಗಿ ವಿಶದಪಡಿಸಿದ್ದಾರೆ.

'ಸಣ್ಣಾಟಗಳ ಪ್ರಯೋಗ-ಕಲಾತಂತ್ರ' ವನ್ನು ಕುರಿತು ಬೇರೆ ಬೇರೆ ವಿದ್ವಾಂಸರುಗಳ ಹೇಳಿಕೆಗಳನ್ನು ಆಧರಿಸಿ, ತಮ್ಮ ಅನುಭವದ ಮೂಸೆಯಲ್ಲಿ ವಿಮರ್ಶಾತ್ಮಕ ಲೇಖನ ಬರೆದಿದ್ದಾರೆ. ಸಮಾರೋಪದಲ್ಲಿ - 'ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಸಣ್ಣಾಟಗಳು ಬದಲಾಗಿ, ಹೊಸತನ ಹೊಂದಿದಾಗ ಮಾತ್ರ

'ಉತ್ತರ ಕರ್ನಾಟಕದ ಬಯಲಾಟಗಳು, ಎನ್.ಆರ್.ನಾಯಕ ಅವರ ಕೂಸಾಯ್ತು ನಮ್ಮ ಕೊಮರಾಗೆ, ದೇವೇಂದ್ರ ಕುಮಾರ ಹಕಾರಿಯರ ಜಾನಪದ ಮೂಲಭೂತ ತತ್ವಗಳು, ಎಚ್.ಜೆ. ಲಕ್ಕಪ್ಪಗೌಡರು ಸಂಪಾದಿಸಿದ 'ಮಲೆನಾಡು ಜಾನಪದ' ಈ ನಾಲ್ಕು ಗ್ರಂಥಗಳು ಸತ್ವಭರಿತವಾದವುಗಳೆಂಬುದನ್ನು ಮರೆಯದೇ ಹೇಳುತ್ತಾರೆ.

ಒಟ್ಟಾರೆ, 'ಜಾನಪದ ಕುರಿತ' ಕೃತಿಯಲ್ಲಿಯ ಎಲ್ಲ ಲೇಖನಗಳು ಪ್ರೊ. ಜ್ಯೋತಿ ಹೊಸೂರ ಅವರ ಅಧ್ಯಯನದ ಮಿತಿಯಲ್ಲಿಯೇ ಸಾರ್ಥಕ್ಯವನ್ನು ಕಂಡುಕೊಂಡಿವೆ. ಅದರಾಚೆಗೂ ಪ್ರವಹಿಸುವ ಜಾನಪದದ ದಟ್ಟ ಅನುಭವ, ಪಾಂಡಿತ್ಯ ಅವರಲ್ಲಿದ್ದರೂ ತಮ್ಮದೇ ಸ್ವಭಾವ ಸಹಜವಾದ ಆಲಸ್ಯತನದಿಂದಾಗಿ, ಸಂಶೋಧನಾಧ್ಯಯನ ವಿಸ್ತಾರಗೊಳ್ಳದೆ ಮೊಟಕುಗೊಂಡುಬಿಡುತ್ತದೆ. ಹೀಗಾಗಿ, ಇಲ್ಲಿಯ ಪ್ರತಿಯೊಂದು ಲೇಖನ ಸ್ಪಷ್ಟ ತಿಳಿವಿಕೆ, ಖಚಿತತೆ, ನಿಶ್ಚಿತತೆಯನ್ನು ಹೊಂದಿ ಗಟ್ಟಿಯಾಗಿ ಮೂಡಿಬಂದಿದ್ದರೂ 'Just Outlines'ಗಳಲ್ಲಿ ಪರಿಸಮಾಪ್ತಿಯಾಗುತ್ತವೆ ಅಥವಾ ನಿಂತುಬಿಡುತ್ತವೆ. ಈಗಲೂ ಕಾಲ ಮಿಂಚಿಲ್ಲ. ಹೊಸೂರ ಅವರು ಈ ಅಪಾಯದಿಂದ ಬಿಡುಗಡೆ ಪಡೆಯುವುದಾದರೆ, ತಮ್ಮ ಪ್ರತಿಭೆ ಪಾಂಡಿತ್ಯ ಹಾಗೂ ಜಾನಪದ ಕಾಳಜಿಯೊಡನೆ, ವೈಚಾರಿಕ ನಿಲುವಿನ ಉತ್ತರ ಕರ್ನಾಟಕದ ಬಹುದೊಡ್ಡ ಜಾನಪದ ಪಂಡಿತ, ವಿದ್ವಾಂಸರೆನ್ನಿಸಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ.

ಡೊಳ್ಳಿನ ಹಾಡುಗಳ ಸಮೀಕ್ಷೆ :

'ಡೊಳ್ಳಿನ ಹಾಡುಗಳು' ತಮ್ಮ ಪರಂಪರೆ, ಪ್ರಾಚೀನತೆ ಮತ್ತು ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆಯಿಂದ ಅಧ್ಯಯನ ಯೋಗ್ಯವಾಗಿವೆ. 'ಹಾಲುಮತ' ಜನಾಂಗವೊಂದರ ಸಂಸ್ಕೃತಿ ವಾಹಕವಾಗಿರುವ ಡೊಳ್ಳಿನ ಹಾಡುಗಳ ಸಂಗ್ರಹ, ಸಂಪಾದನೆ, ಸಂಶೋಧನೆ ಶಾಸ್ತ್ರೀಯ ನೆಲೆಯಲ್ಲಿ ಇನ್ನೂ ಆಗಬೇಕಾಗಿದೆ. ಪ್ರಸ್ತುತ ಈ ಡೊಳ್ಳಿನ ಹಾಡುಗಳ ಸಮೀಕ್ಷೆ ಈ ನಿಟ್ಟಿನಲ್ಲಿಯ ಕೊರತೆಯನ್ನು

ತುಸುಮಟ್ಟಿಗೆ ತುಂಬಿಕೊಡುತ್ತದೆ. ಲೇಖಕರು ಮೂಲತಃ ಹಾಲುಮತಕ್ಕೆ ಸಂಬಂಧ ಪಟ್ಟವರಾದ್ದರಿಂದ ಸಹಜವಾಗಿಯೇ ಅವರಲ್ಲಿ ಹಾಡುಗಳ ಮತ್ತು ಹಾಡುಗಾರರ ನಿಕಟ ಸಂಪರ್ಕ ಒದಗಿಬಂದಂತೆ ತೋರುತ್ತದೆ. ಎಳವೆಯಲ್ಲಿಯ ಈ ಹಾಡುಗಳ ಬಗೆಗಿನ ಆಸಕ್ತಿ ಬೆಳೆದು, ಬೆಳ್ಳಬೆಳತನಕ ಡೊಳ್ಳುಮೇಳದಲ್ಲಿ, ವಾಲಗಗಳ ಸಮಾವೇಶದಲ್ಲಿ ಭಾಗವಹಿಸುತ್ತ ಬಂದರು. ಮುಂದೆ ಹಾಡುಗಳ ತಲಸ್ಪರ್ಶಿ ಅಧ್ಯಯನ ಮಾಡಿದರು. ಇತರರು ಆಗಲೇ ಸಂಪಾದಿಸಿದ ಡೊಳ್ಳಿನ ಹಾಡುಗಳನ್ನೆಲ್ಲ ಅವಲೋಕಿಸಿದ್ದಾರೆ. ಡೊಳ್ಳು ಹಾಡುಗಳ ಕುರಿತ ಬರೆಹಗಳನ್ನು ಕುತೂಹಲದಿಂದ ಅಭ್ಯಸಿಸಿದ್ದಾರೆ. ಜ್ಯೋತಿ ಹೊಸೂರರವರ ಅವಲೋಕನ ಮತ್ತು ಅಧ್ಯಯನದ ಫಲವಾಗಿ ಪ್ರಸ್ತುತ ಪುಸ್ತಿಕೆ ರೂಪುಗೊಂಡಿದೆ. ಈ ಕ್ಷೇತ್ರದಲ್ಲಿ ಸಂಶೋಧನಾಧ್ಯಯನ ಮಾಡುವವರಿಗೆ ವಿಪುಲ ಮಾಹಿತಿ ನೀಡುವ ಉಪಯುಕ್ತ ಕೃತಿಯಿದು. ಇದರಲ್ಲಿ 'ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಹಿನ್ನೆಲೆ', 'ಡೊಳ್ಳಿನ ಹಾಡುಗಳ ಜಾನಪದ ನೆಲೆ', 'ಜಾನಪದ ಹಾಡುಗಳೊಂದಿಗೆ ಡೊಳ್ಳಿನ ಹಾಡುಗಳುಳ್ಳ ಪ್ರಕಟನೆಗಳು', 'ಸಂಪೂರ್ಣ ಡೊಳ್ಳಿನ ಹಾಡುಗಳುಳ್ಳ ಪ್ರಕಟನೆಗಳು', 'ಡೊಳ್ಳಿನ ಹಾಡುಗಳ ಕುರಿತು ಬರೆಹಗಳ ಪರಿಶೀಲನೆ' ಇತ್ಯಾದಿ ವಿಮರ್ಶಾತ್ಮಕ ಲೇಖನಗಳನ್ನು ಅಳವಡಿಸಲಾಗಿದೆ. ಪುಸ್ತಿಕೆಯ ಕೊನೆಯಲ್ಲಿ ಲೇಖಕರು ಆಡುವ ಮಾತುಗಳು ಪರಿಶೀಲನಾರ್ಹವಾಗಿವೆ. "ಡೊಳ್ಳು ಮತ್ತು ಡೊಳ್ಳಿನ ಹಾಡುಗಳನ್ನು ಕುರಿತಂತೆ ಪ್ರಕಟವಾಗಿರುವ ಬರೆವಣಿಗೆ ತೀರ ಸ್ವಲ್ಪ.... ಮೇಳಗಳ ಸರಿಯಾದ ಕ್ರಮ, ಹಾಡುಗಳ ಮತ್ತು ಹಾಡುಗಾರರ ಮಜಲುಗಳ ರೀತಿ, ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಹಾಡುಗಳ ವಸ್ತುವೈವಿಧ್ಯದ ವಿಶ್ಲೇಷಣೆ ಹಾಗೂ ಪರಂಪರಾಗತ ವಿವಿಧ ಬಗೆಯ ಪಾರಿಭಾಷಿಕಗಳ ವಿವರಣೆ ಇತ್ಯಾದಿಗಳ ಬಗೆಗೆ ಹೆಚ್ಚಿನ ಮತ್ತು ನಿಖರವಾದ ಮಾಹಿತಿ ಇಂದಿನವರೆಗೆ ಹೊರಬಂದಿಲ್ಲ.

ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು (೨೦೦೭)

ಜಾನಪದ ದೈವಗಳ ಅಧ್ಯಯನವನ್ನು ಶಾಸ್ತ್ರೀಯ ನೆಲೆಯಲ್ಲಿ ಮಾಡಬೇಕೆನ್ನುವವರಿಗೆ ಈ ಪುಸ್ತಿಕೆ ತೋರುಬೆರಳು. ಬೀರಪ್ಪ ಕುರುಬ

ಜನಾಂಗದ ಅಧಿದೈವ. ಕುರುಬ ಜನಾಂಗ ಮತ್ತು ಬೀರಪ್ಪದೇವರಲ್ಲಿ ಅವಿನಾಭಾವ ಸಂಬಂಧವಿದೆ. ಇಲ್ಲಿ ಗೊಲ್ಲೇರಿಯ ಗೊಲ್ಲಾಳ, ಹುಲಜಂತಿಯ ಮಾಳಪ್ಪ, ಪಟ್ಟಣಕಡೋಲಿಯ ಇಟ್ಟಪ್ಪ–ಮೂವರು ಮಹಾಪುರುಷರ ಪರಿಚಯ ಮತ್ತು ಅವರ ಕ್ಷೇತ್ರಗಳ ಮಾಹಿತಿಯನ್ನು ಲೇಖಕರು ಸಂಕ್ಷಿಪ್ತವಾಗಿ ಮಾಡಿಕೊಟ್ಟಿದ್ದಾರೆ. ಈ ದೈವತಗಳ ಮೂಲ ಮತ್ತು ಪ್ರೇರಕ ಶಕ್ತಿ ಬೀರಪ್ಪದೇವನೆಂಬುದನ್ನು ದೃಢಪಡಿಸುವ ಪ್ರಯತ್ನ ಇಲ್ಲಿ ಇದ್ದಂತಿದೆ. ಈ ಮೂವರಿಗೂ ಬೀರಪ್ಪ ದೇವರಿಗೂ ಇರುವ ಸಂಬಂಧವನ್ನು ಪ್ರಸ್ತಾವನೆಯಲ್ಲಿ ಸ್ಪಷ್ಟಪಡಿಸುವ ಲೇಖಕರ ಪ್ರಯತ್ನ ಮೆಚ್ಚುವಂತಿದ್ದರೂ ಒಪ್ಪಿಕೊಳ್ಳಲು ಅವರು ನೀಡುವ ಆಧಾರಗಳು ಸಾಲವು. ಇದು ಲೇಖಕರಿಗೂ ಗೊತ್ತು. ಅದಕ್ಕಾಗಿ ಈ ನಿಟ್ಟಿನಲ್ಲಿ ವಿಶೇಷ ಅಧ್ಯಯನ ನಡೆಯಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

ಜಾನಪದದ ಬಿಡಿ ಲೇಖನಗಳು

ತಮ್ಮ ಬಿಡಿ ಲೇಖನಗಳ ಮೂಲಕವಾಗಿಯೂ ಜಾನಪದಕ್ಕೆ ಬೆಲೆಯುಳ್ಳ ಕೊಡುಗೆ ನೀಡಿದವರು ಪ್ರೊ. ಜ್ಯೋತಿ ಹೊಸೂರ ಅವರು. ಇವರು 'ಜನಪದ ಸಾಹಿತ್ಯದಲ್ಲಿ ಮೂಡಿಬಂದ ರಾಯಣ್ಣ' ಎಂಬ ದೀರ್ಘವಾದ ಲೇಖನವನ್ನು ಬರೆದಿದ್ದಾರೆ. ಅದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಇವರಿಂದ ಸಂಗೊಳ್ಳಿ ರಾಯಣ್ಣ (೧೯೮೫) ಹೆಸರಿನ ಪುಸ್ತಕದಲ್ಲಿ ಪ್ರಕಟವಾಗಿದೆ. ರಾಣಿ ಕಿತ್ತೂರು ಚೆನ್ನಮ್ಮನ ಸ್ವಾಮಿನಿಷ್ಠ ಸಂಗೊಳ್ಳಿ ಗ್ರಾಮದ ಒಬ್ಬ ಓಲೆಕಾರ ವೀರಸಂಗೊಳ್ಳಿ ರಾಯಣ್ಣ, ಬ್ರಿಟಿಷರು ಕಿತ್ತೂರು ರಾಣಿ ಚೆನ್ನಮ್ಮನನ್ನು ಅವಳ ಪರಿವಾರದವರನ್ನು ಬಂಧಿಸಿ, ಕಿತ್ತೂರು ದೇಶಗತಿಯನ್ನು ವಶಪಡಿಸಿಕೊಂಡರು. ಬ್ರಿಟಿಷರ ವಿರುದ್ಧ ಚೆನ್ನಮ್ಮ ನಡೆಸಿದ ಹೋರಾಟದಲ್ಲಿ ರಾಯಣ್ಣನೂ ಭಾಗಿಯಾಗಿ ಬಂಧಿತನಾಗಿದ್ದ. ಮುಂದೆ ಬ್ರಿಟಿಷರಿಂದ ಬಿಡುಗಡೆ ಪಡೆದ ರಾಯಣ್ಣ, ಕಳೆದುಹೋದ ಕಿತ್ತೂರು ದೇಶಗತಿಯನ್ನು ಮರಳಿ ಪಡೆಯಬೇಕೆಂದು ಬ್ರಿಟೀಷರ ವಿರುದ್ಧ ಕಾದುತ್ತ ಕಾದುತ್ತ, ಸ್ವಜನರ ದ್ರೋಹದಿಂದ ಗಲ್ಲುಗಂಭವನ್ನೇರಿ ಅಮರನಾದ. ಇಂಥ ಕೆಚ್ಚೆದೆಯ ವೀರನನ್ನು ಕುರಿತು

ನಮ್ಮ ಜನಪದ ಸಾಹಿತ್ಯ ಹಾಡಿಹೊಗಳಿದೆ. ನಮ್ಮ ಗ್ರಾಮೀಣ ಹೆಣ್ಣು ಮಕ್ಕಳು, ಗಂಡುಮಕ್ಕಳು, ಲಾವಣಿಕಾರರು ಕಣ್ಣಿಗೆ ಕಟ್ಟುವಂತೆ ಆತನ ವೀರ ಜೀವನವನ್ನು ತ್ರಿಪದಿಗಳಲ್ಲಿ, ಕೋಲುಪದಗಳಲ್ಲಿ, ದುಂದುಮೆಗಳಲ್ಲಿ, ಲಾವಣಿಗಳಲ್ಲಿ, ಡೊಳ್ಳು ಪದಗಳಲ್ಲಿ ಹಂತಿ–ಪದಗಳಲ್ಲಿ, ಐತಿಹ್ಯಗಳಲ್ಲಿ ವರ್ಣಿಸಿದ್ದಾರೆ. ಲಾವಣಿಕಾರರಂತೂ ರಾಯಣ್ಣನ ವೀರವ್ಯಕ್ತಿತ್ವದ ಎಳೆಎಳೆಯನ್ನು ಚಿತ್ರಿಸಿದ್ದಾರೆ. ತ್ರಿಪದಿ, ಕೋಲಾಟ ಪದಗಳು, ಲಾವಣಿ ಮುಂತಾದ ಆಕರ ಸಾಮಗ್ರಿಗಳ ಸಹಾಯದಿಂದ ರಾಯಣ್ಣನ ವೀರಜೀವನವನ್ನು ಹೊಸೂರ ಅವರು ಬಂಧುರವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಜನಪದ ಸಾಹಿತ್ಯದಲ್ಲಿ ರಾಯಣ್ಣನ ಚಿತ್ರ ಅದೆಷ್ಟು ನೈಜವಾಗಿ, ಸರಳ ಸುಂದರವಾಗಿ ಮೂಡಿಬಂದಿದೆಯೋ ಅಷ್ಟೇ ಸರಳವಾಗಿ, ಸುಂದರವಾಗಿ ಮತ್ತು ನೈಜವಾಗಿ ತಮ್ಮ ಸುಲಭವಾದ ಭಾಷೆಯಲ್ಲಿ ಲೇಖಕರು ಚಿತ್ರಿಸಿದ್ದಾರೆ. ಜನಪದ ಸಾಹಿತ್ಯದ ಪ್ರಮುಖ ಪ್ರಕಾರವಾದ ಲಾವಣಿ ಸಾಹಿತ್ಯವು ಅತ್ಯಂತ ಸಮರ್ಥವಾಗಿ ಹಾಗೂ ಸವಿವರವಾಗಿ, ರಾಯಣ್ಣನ ವ್ಯಕ್ತಿತ್ವದ ವೈಸಿಷ್ಟ್ಯಗಳನ್ನೆಲ್ಲಾ ಬಿಡಿಸಿ ತೋರಿದುದನ್ನು ಲೇಖಕರು ಗುರುತಿಸುತ್ತಾರೆ. ಒಟ್ಟಾರೆಯಾಗಿ 'ಜನಪದ ಸಾಹಿತ್ಯದಲ್ಲಿ ಮೂಡಿಬಂದ ರಾಯಣ್ಣ ಸಂವೇದನಾಶೀಲ ಸ್ವಭಾವದ ಅಭಿಮಾನಧನನಾಗಿದ್ದಾನೆ, ವೀರಾಧಿವೀರನಾಗಿದ್ದಾನೆ, ಚತುರ ಸಂಘಟನಕಾರನಾಗಿದ್ದಾನೆ, ಮಹಾವೀರನಾಗಿದ್ದಾನೆ ಅಂತೆಯೇ ಪೂಜ್ಯನಾಗಿದ್ದಾನೆ' ಎಂದು ಲೇಖಕರು ಅಭಿಮಾನ ಉಕ್ಕಿ ಅಭಿಪ್ರಾಯಿಸಿದ್ದು ಅರ್ಥಪೂರ್ಣವಾಗಿದೆ. ಸಂಗೊಳ್ಳಿ ರಾಯಣ್ಣನ ಬಗೆಗಿನ ಜನಪದ ಸಾಹಿತ್ಯವನ್ನು ಜಾಲಾಡಿಸಿ ಇಷ್ಟು ವಿವರಣಾತ್ಮಕವಾಗಿ ರಾಯಣ್ಣನ ಜೀವನ ಚಿತ್ರಣವನ್ನು ಕೊಟ್ಟಿಕೊಟ್ಟ ಲೇಖನವನ್ನು ಈ ಮೊದಲು ಯಾರೂ ಬರೆದಂತೆ ತೋರುವುದಿಲ್ಲ.

ಪತಿಯ ನಡತೆಯ ಬಗೆಗೆ ಸಂಶಯ ತಾಳಿರುವ ಸತಿಯೋರ್ವಳು ಅವನನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ನಂತರ ನಡೆದ ಸಂದರ್ಭದಲ್ಲಿಯ 'ಸರಸ ಸಂವಾದ' ರೂಪದ ಜನಪದ ಕಾವ್ಯವೊಂದರ ಪ್ರಥಮ ವಿಮರ್ಶೆಯನ್ನು

ಜ್ಯೋತಿ ಹೊಸೂರ ಅವರು ಮಾಡುತ್ತಾ, ಮೇಲು ನೋಟದ ವಿಮರ್ಶೆಯಿಂದ, ಕವಿತೆಯ ಒಳನೋಟದ ವಿಮರ್ಶೆಗೆ ಇಳಿದು, ಅಲ್ಲಿ ಅಂತರ್ಗತವಾದ ಸಂಕೇತಿತಾರ್ಥವನ್ನು ಗ್ರಹಿಸಿದ್ದು ಅವರ ವಿಮರ್ಶನ ಶಕ್ತಿಗೊಂದು ನಿದರ್ಶನ. ಈ ಪದ್ಯದ ಪ್ರತಿನುಡಿಯಲ್ಲಿ ರಂಗರಾಯರು ತನ್ನ ಭಾಮಿನಿಗೆ ತಾನು ಅವಳು ಭಾವಿಸಿದಂತೆ ಹೆಣ್ಣಿನ ಸಂಗಹೊಂದಿ ಬಂದಿಲ್ಲವೆಂದು ಪ್ರತಿಪಾದನೆ ಮಡುತ್ತಲೇ ಹೋದಂತೆ ತೋರುತ್ತದೆ. ಆದರೆ ಕೊನೆಯಲ್ಲಿಯ 'ಕೂಡಹೊರಿಸುವುದು', 'ಓಕುಳಿಯಾಟ' – ಈ ಪದಗಳಲ್ಲಿ ಕಾಮಕೇಳಿಯ, ಸಂಭೋಗದ ಸೂಚನೆಯೇ ಇದ್ದುದನ್ನು ಅಂದರೆ ಇಲ್ಲಿಯ ರಂಗರಾಯ ಹೆಣ್ಣಿನ ಸಂಗ ಹೊಂದಿ ಬಂದುದು ನಿಜವೆಂಬುದನ್ನು, ಕವಿ ಬಹಳ ಜಾಣತನದಿಂದ ಧ್ವನಿ ಪೂರ್ಣವಾಗಿ ನಿರೂಪಿಸಿದುದನ್ನು, ಹೊಸೂರ ಅವರು ಸರಿಯಾಗಿಯೇ ಗ್ರಹಿಸಿ, ಇದುವೇ ಈ ಹಾಡಿನ ಹೆಚ್ಚುಗಾರಿಕೆ ಮತ್ತು ಸೊಗಸು ಎಂದು ಪ್ರತಿಪಾದನೆ ಮಾಡುತ್ತಾರೆ. ('ಸರಸ ಸಂವಾದ'– ಪ್ರಥಮ ವಿಮರ್ಶೆ–ಲೇಖನ–'ಜನಪದ ಗಂಗೋತ್ರಿ'– ಸಂ.೪; ಸಂ.೨, ಮಾರ್ಚ್ ೧೯೬೦ ರಲ್ಲಿ ಪ್ರಕಟವಾದುದು)

ಡಾ. ಹಾ.ಮಾ. ನಾಯಕರು ಮಾಡಿದ ಜಾನಪದ ವಿಭಾಗ ಕ್ರಮವನ್ನು ಮಾರ್ಪಡಿಸಿ, ೧೯೭೧ರಷ್ಟು ಹಿಂದೆಯೇ ಜ್ಯೋತಿ ಹೊಸೂರರವರು 'ಕನ್ನಡ ಜಾನಪದದ ಮುಖ್ಯ ವಿಭಾಗಗಳು' ಎನ್ನುವ ಲೇಖನದಲ್ಲಿ –

೧. ಜಾನಪದ ವಾಙ್ಮಯ (ನುಡಿ, ನುಡಿಗಟ್ಟು, ಗಾದೆ, ಒಗಟು, ಒಡಪು, ಗೀತೆ, ಕಥೆ, ನಾಟಕ)

೨. ಜನಪದ ಕ್ರಿಯೆ (ಸನ್ನೆ, ಅಭಿನಯ, ನೃತ್ಯ, ಸಂಗೀತ, ಆಟ ನೋಟ, ಉಡಿಗೆ ತೊಡಿಗೆ)

೩. ಜನಪದ ಧರ್ಮ (ದೇವರು, ಧರ್ಮ, ನೀತಿಯ ಬಗೆಗೆ ಜನರ ಕಲ್ಪನೆ, ಭಾವನೆ, ಉಪಾಸನೆ, ವಿಧಿವಿಧಾನಗಳು)

೪. ಜನಪದ ವಿಜ್ಞಾನ (ವೈದ್ಯ, ಮಾಟ, ಮಂತ್ರ, ಭವಿಷ್ಯ, ಮಳೆ ಬೆಳೆ, ದನಕರುಗಳ ಲಕ್ಷಣಾದಿಗಳ ವಿಚಾರ, ಕಾರ್ಯ ಕಾರಣಸೂಚಿ, ನಂಬುಗೆ)

೫. ಜನಪದ ಸಂಪ್ರದಾಯ (ರೂಢಿ, ಆಚಾರ, ಮೂಢನಂಬುಗೆ)

ಹೀಗೆ ಐದು ಬಗೆಯಾಗಿ ಜಾನಪದವನ್ನು ವಿಭಾಗಿಸುತ್ತಾರೆ. ಇದು ಜಾನಪದದ ಸಮಸ್ತ ವಿಷಯವನ್ನು ಒಳಗೊಳ್ಳುವ ವರ್ಗೀಕರಣವೆಂದು ಧೈರ್ಯದಿಂದ ಹೇಳಿಕೊಂಡಿದ್ದಾರೆ. ಈ ಲೇಖನ ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ' (ಸಂ.೪; ಸಂ.೧೧, ೧೯೭೧) ಯಲ್ಲಿ ಪ್ರಕಟವಾಗಿದೆ.

ಜಾನಪದಕ್ಕೆ ಸಂಬಂಧಿಸಿದ ಪತ್ರಿಕಾ ಲೇಖನಗಳು

ಕರ್ನಾಟಕದ ಉತ್ತರ ಗಡಿಭಾಗದಲ್ಲಿ (ಹಾರೂಗೇರಿ–ರಾಯಬಾಗ) 'ಕಾಲ' ಎನ್ನುವ ಸಾಹಿತ್ಯದ ಪತ್ರಿಕೆಯನ್ನು ೧೯೭೭ರಲ್ಲಿ ಸುರು ಮಾಡುವುದರ ಮೂಲಕ ಪತ್ರಿಕಾರಂಗದಲ್ಲಿ ದಿಟ್ಟ ಹೆಜ್ಜೆಯನ್ನಿಡುವ ಸಾಹಸವನ್ನು ಮಾಡಿದವರು ಜ್ಯೋತಿ ಹೊಸೂರ ಅವರು. ಎಲ್ಲ ದೃಷ್ಟಿಯಿಂದಲೂ ಪ್ರತಿಕೂಲ ಸಂದರ್ಭದಲ್ಲಿ ವರುಷದಲ್ಲಿ ಮೂರು (ಕಾಲ–೧ ಬೇಸಿಗೆ; ಕಾಲ–೨ ಮಳೆ; ಕಾಲ–೩ ಚಳಿ) ಸಂಚಿಕೆಗಳನ್ನು ಓದುಗರ ಕೈಗೆ ನೀಡುವ ಹಂಬಲ ಹೊತ್ತು 'ಕಾಲ–ಸಾಹಿತ್ಯಕ ಪತ್ರಿಕೆಯನ್ನು ತಮ್ಮ ಸಂಪಾದಕತ್ವದಲ್ಲಿ ಸುರುಮಾಡಿದರು. ಜಾನಪದ ಮನೋಧರ್ಮದ ಹೊಸೂರರವರ ಈ ಪತ್ರಿಕೆಯ ಒಳವಿಷಯ ಸಹಜವಾಗಿ ಶಿಷ್ಟಕ್ಕಿಂತಲೂ ಜಾನಪದಕ್ಕೆ ಮೀಸಲಾದಂತಾಯಿತು. ಇವರು ಸ್ವತಃ ಅಭ್ಯಾಸಪೂರ್ಣ ಜಾನಪದ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುವುದರ ಜೊತೆಗೆ ಇತರರು ಬರೆದ ಜಾನಪದ ಲೇಖನಗಳನ್ನು ಸಂಗ್ರಹಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬಂದರು. ಜನಪದ ಕುರಿತ ಚಿಂತನೆ–ವಾದವಿವಾದಗಳನ್ನೂ ಸಂಗ್ರಹಗಳನ್ನೂ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬಂದರು. ಜಾನಪದ ಕುರಿತ ಚಿಂತನೆ–ವಾದವಿವಾದಗಳನ್ನೂ ಪ್ರಕಟಿಸತೊಡಗಿದರು. ಜಾನಪದ ಶೈಲಿಯ ಕವಿತೆಗಳ ಪ್ರಕಟನೆ, ಜಾನಪದ ಸಂವೇದನೆಯ ಕೃತಿಗಳ ಪರಿಚಯ–ವಿಮರ್ಶೆ

ಕೂಡ ಪತ್ರಿಕೆಯಲ್ಲಿ ನಡೆಯಲಾರಂಭಿಸಿತು. ಜಾನಪದದ ಒಂದಾದರೂ ಬರೆಹ ಪ್ರತಿ ಪತ್ರಿಕೆಯಲ್ಲಿ ಇರುವಂತೆ ಸಂಪಾದಕರು ಕಾಳಜಿ ವಹಿಸಿದ್ದರು. ಬರಬರುತ್ತ 'ಕಾಲ' ಪತ್ರಿಕೆ 'ಕಾಲಗತಿ' ಹೆಸರಿನಿಂದ ಮಾರ್ಪಾಟುಗೊಂಡು ಎರಡು ವರುಷಗಳ ಅವಧಿಯಲ್ಲಿ ಒಟ್ಟು ಏಳು ಸಂಚಿಕೆಗಳು ಹೊರಬಂದುವು. ಓದುಗರ, ಚಂದಾದಾರರ, ಯೋಗ್ಯ ಬರೆಹಗಾರರ ಕೊರತೆಯಿಂದಾಗಿ ಪತ್ರಿಕೆ ನಿಂತುಹೋಯಿತು. ಪತ್ರಿಕೆ ಮುಂದುವರಿದಿದ್ದರೆ, ಹೊಸೂರರು ಜಾನಪದಕ್ಕೆ ದೊಡ್ಡ ಕೊಡುಗೆಯನ್ನು ಖಂಡಿತ ನೀಡುತ್ತಿದ್ದರು.

'ಕಾಲ'–೧ ಬೇಸಿಗೆಯ ಸಂಚಿಕೆಯಲ್ಲಿ – ಜಾನಪದದ ಒಗಟಿನ ಪ್ರಭಾವದಿಂದ ರಚನೆಗೊಂಡ ಪದ್ಯ, ಡಾ। ಸಂಗಮೇಶ ಸವದತ್ತಿ ಮಠ ಅವರ 'ಉತ್ತರ ಕರ್ನಾಟಕದ ಅಪೂರ್ವ ಯಕ್ಷಗಾನ ಕವಿ ದುರದುಂಡೀಶ' ಎಂಬ ಸಂಶೋಧನ ಲೇಖನ, ನವ್ಯಕವಿತೆಗಳಲ್ಲಿ ಒಗಟಿನ ಅಂಶಲೇಖನ, ಬುಡಬುಡಿಕ್ಯಾ ಬಂದ ಕವಿತೆ, ಜ್ಯೋತಿ–ಹೊಸೂರರ 'ಗೊಂದಲ ಮತ್ತು ಗೊಂದಲಿಗರ ಹಿನ್ನೆಲೆ' ಸಂಶೋಧನ ಲೇಖನ, ಬೆಟಗೇರಿ ಕೃಷ್ಣಶರ್ಮರ 'ಗೊಂದಲಿಗನ ಬೆಂದಬಾಳು' ಎನ್ನುವ ಜನಪದ ಶೈಲಿಯ ಕವಿತೆ ಮುಂತಾದುವೆಲ್ಲ ಪ್ರಕಟಗೊಂಡುದನ್ನು ನೋಡಿದರೆ 'ಕಾಲ' ಎನ್ನುವ ಪತ್ರಿಕೆ ಒಂದು ಜನಪದ ಪತ್ರಿಕೆ ಮಾಡುವ ಕಾರ್ಯವನ್ನು ಮಾಡಿದೆ ಎನ್ನಬಹುದು.

ಕಾಲ–೨, ಮಳೆಗಾಲ ಸಂಚಿಕೆಯಲ್ಲಿ ಡಾ। ಎಂ.ಬಿ. ಭೋಯಿ ಅವರ 'ಗೊಂದಲಿಗ ಪದ ರೂಪನಿಷ್ಪತ್ತಿ ಮತ್ತು ಗೊಂದಲಿಗರ ಮೂಲ ಸಂಶೋಧನ ಲೇಖನ ಪ್ರಕಟಗೊಂಡಿದೆ. ಹಾಗೆಯೇ ವೀರಣ್ಣ ದಂಡೆಯವರ 'ಒಕ್ಕಲಿಗನ ಎರಡು ಸಂಕೇತ ಶಕ್ತಿಗಳು' ಎನ್ನುವ ಸಂಶೋಧನ ಲೇಖನ ಇದೆ. ಅಂತೆಯೇ ಭೋಜರಾಜ ಪಾಟೀಲರು ಸಂಗ್ರಹಿಸಿದ 'ಪರದೇಶದಿಂದ ಬಂದ ಜಾಣ' (ರಂಗುಲಾವಣಿ), 'ಏನಸೋಗ ಮಾಡತಾಳ ನಾರಿ' ಮತ್ತು 'ಯಾವ ಕಾಡಿಗೆ ಹೋದಳೋ ಎನ್ನ ಮೋಹದ ಗುಣವಂತಿ' ಎನ್ನುವ ಲಾವಣಿಗಳು ಇದೇ ಪತ್ರಿಕೆಯಲ್ಲಿ ಬೆಳಕುಕಂಡಿವೆ.

ಕಾಲ-೩, ಚಳಿಗಾಲ ಸಂಚಿಕೆ (೧೯೭೭) ಯಲ್ಲಿ, ವೀರಣ್ಣ ದಂಡೆಯವರ 'ಕನ್ನಡ ಲಾವಣಿ ಮತ್ತು ಇಂಗ್ಲೀಷ್ ಬ್ಯಾಲೆಡ್' ಎನ್ನುವ ದೀರ್ಘ ಲೇಖನವಿದೆ. ಬೇರೆ ಬೇರೆ ಆಕರಗಳ ಸಹಾಯದಿಂದ ಬರೆದ ಲೇಖನವಿದು. ಲಾವಣಿ-ಕಥನಕವನ-ಬ್ಯಾಲೆಡ್ ಇತ್ಯಾದಿ ವಿಷಯಗಳ ಕುರಿತ ದೀರ್ಘವಾದ ಚರ್ಚೆಯ ಈ ಲೇಖನ ಪ್ರಕಟಿಸುವುದರ ಮೂಲಕ, ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲೊಂದಾದ 'ಲಾವಣಿ' ಬಗೆಗಿನ ಗೊಂದಲವನ್ನು ಬಗೆಹರಿಸುವ ಪ್ರಯತ್ನ ಮಾಡಿದಂತಾಗಿದೆ. ಈಗ 'ಕಾಲ' ಪತ್ರಿಕೆಯ ಹೆಸರು ತಾಂತ್ರಿಕ ಕಾರಣದಿಂದ 'ಕಾಲಗತಿ' ಎಂದು ಬದಲಾಯಿತು.

ಕಾಲಗತಿ-೪, ಜುಲೈ, ಆಗಸ್ಟ್, ಸೆಪ್ಟೆಂಬರ್ ಸಂಚಿಕೆ ೧೯೭೮, ಇದರಲ್ಲಿ ಸಂಪಾದಕ ಜ್ಯೋತಿ ಹೊಸೂರ ಅವರ 'ಗೊಂದಲದ ಗೊಂದಲ' ಲೇಖನ ಪ್ರಕಟವಾಗಿದೆ.

ಕಾಲಗತಿ-೫, ಅಕ್ಟೋಬರ್, ನವ್ಹೆಂಬರ್, ಡಿಸೆಂಬರ್, ೧೯೭೮ರ ಪತ್ರಿಕೆಯಲ್ಲಿ ಶ್ರೀ ಎಸ್.ಎಸ್. ಪೂಜಾರ ಅವರ 'ಹಾಲು ಮತದ ಹರಕೆಯ ಹಾಡು'- ಜನಪದ ಲೇಖನ ಪ್ರಕಾಶಿತಗೊಂಡಿದೆ.

ಕಾಲಗತಿ-೬, ಜನವರಿ, ಫೆಬ್ರವರಿ, ಮಾರ್ಚ್, ೧೯೭೯ರ ಸಂಚಿಕೆಯಲ್ಲಿ ಡಾ. ಸಂಗಮೇಶ ಸವದತ್ತಿಮಠ ಅವರ 'ಜನಪದ ಹಾಡುಗಳ ಭಾಷೆ ಹಾಗೂ ಸಂಪಾದನೆ' ಎಂಬ ಲೇಖನ ಪ್ರಕಟಗೊಂಡಿದೆ. ಹಾಗೂ ದಿ. ಆರ್. ತಿಪ್ಪೇಸ್ವಾಮಿಯವರ 'ಸೂತ್ರದ ಗೊಂಬೆಯಾಟ' – ಜಾನಪದ ಲೇಖನ ಕೂಡ ಪ್ರಕಾಶಿತಗೊಂಡಿದೆ.

ಕಾಲಗತಿ-೭, ಏಪ್ರಿಲ್, ಮೇ, ಜೂನ್ ೧೯೭೯ರ ಸಂಚಿಕೆಯಲ್ಲಿ ವೀರಣ್ಣ ಎಸ್. ದಂಡೆಯವರ 'ಒಂದು ಜನಪದ ಕಥೆಯ ವಸ್ತು ಮತ್ತು ತಂತ್ರ: ಒಕ್ಕಲಿಗ ಮತ್ತು ಹಕ್ಕಿ' ಮತ್ತು ಜ್ಯೋತಿ ಹೊಸೂರ ಅವರ 'ಒಡಪು ಪದದ ರೂಪನಿಷ್ಪತ್ತಿ' ಲೇಖನಗಳು ಪ್ರಕಟಗೊಂಡಿವೆ.

ಇಲ್ಲಿ ಡಾ। ಎಂ.ಎಸ್. ಲಠ್ಠೆಯವರ ಪೊಡರ್ಪು> ಪೊಡಪು> ಹೊಡಪು > 'ಒಡಪು' ಎಂದಾಗಿರಬೇಕೆನ್ನುವ ತಾರ್ಕಿಕ ವಿಚಾರವನ್ನು ಜ್ಯೋತಿ ಹೊಸೂರ ಅವರು ಅಲ್ಲಗಳೆಯುತ್ತಾರೆ. 'ಒಡಪು' ಪದವು ಪೊಡರ್ಪು ಪದದ ರೂಪಾಂತರ ಆಗಿರಲಾರದು ಅದು ಅಂದರೆ ಒಡಪು ಪದವು ಒಡ=ಒಡೆ =Union, being together, together with ಎಂಬುದಕ್ಕೆ 'ಪು' ಪ್ರತ್ಯಯ ಸೇರಿ ಸಿದ್ಧವಾದ ನಾಮಪದ. ಗಂಡನ ಮತ್ತು ಹೆಂಡತಿಯ ಹೆಸರಿಗೆ ವರ್ಣನಾತ್ಮಕ ಹಿನ್ನೆಲೆಯಾಗಿ ಅದರೊಂದಿಗೆ ಒಡಗೂಡಿಯೇ ಬರುವುದರಿಂದ ಇದು 'ಒಡಪು' ಎಂಬುದಾಗಿ ಜ್ಯೋತಿ ಹೊಸೂರ ಅದರ ನಿಷ್ಪತ್ತಿಯನ್ನು ಹೇಳುತ್ತಾರೆ. ಈ ನಿಷ್ಪತ್ತಿಯನ್ನು ಸಮರ್ಥಿಸುವ ಎರಡು ಹೊಸ ಆಧಾರಗಳನ್ನು ಕೊಡುತ್ತಾರೆ. ಇಂಥಲ್ಲೆಲ್ಲ ಹೊಸೂರ ಅವರ ಸೂಕ್ಷ್ಮ ಹಾಗೂ ತೀಕ್ಷ್ಣವಾದ ಜಾನಪದ ಗ್ರಹಿಕೆ ಹಾಗೂ ತರ್ಕವನ್ನು ಗುರುತಿಸಬಹುದು. ಹೊಸೂರ ಅವರು ತಾವೇ ಬರೆದು ತಮ್ಮ ಪತ್ರಿಕೆಯಲ್ಲಿ ಪ್ರಕಾಶಿಸಿದ ಜಾನಪದ ಲೇಖನಗಳನ್ನು ತಮ್ಮ ಜಾನಪದ ಕೃತಿಗಳಲ್ಲಿ ಸಂಗ್ರಹಿಸಿದ್ದು ಕಂಡುಬರುತ್ತವೆ.

ಪುಸ್ತಕ ಪ್ರಕಾಶನ

ಗಡಿನಾಡಿನ ಭಾಗದಲ್ಲಿ ತಾವೇ ಸ್ವಂತ ಸಾಹಿತ್ಯ ಪ್ರಕಾಶನಗಳನ್ನು ಕಟ್ಟಿ ಸಾಹಿತ್ಯ ಪ್ರಕಟನೆ ಮಾಡಿದ ಮಹಾಸಾಹಸಿ ಜ್ಯೋತಿ ಹೊಸೂರ ಅವರು. 'ಕಾಲಗತಿ ಪ್ರಕಾಶನ' ಸಂಸ್ಥೆಯನ್ನು ರಾಯಬಾಗದಲ್ಲಿ ಪ್ರಾರಂಭಿಸಿ, ಅದರಲ್ಲಿ ಪ್ರಕಟಿಸಿದ ಕೀರ್ತಿ ಹೊಸೂರ ಅವರದು. ಹಾಗೆಯೇ 'ಜಾನಪದ ಮಂಟಪ' ದ ಹೆಸರಿನಲ್ಲಿ ಸ್ವಂತದ ಏಳು ಗ್ರಂಥ ಮತ್ತು ಇತರರ ಐದು ಹೀಗೆ ಒಟ್ಟು ಹನ್ನೆರಡು ಜಾನಪದ ಗ್ರಂಥಗಳನ್ನು ಲಾಭದಾಸೆಯಿಲ್ಲದೆ ಕೇವಲ ಜಾನಪದದ ಮೇಲಿನ ಪ್ರೀತಿಯಿಂದ ಪ್ರಕಟಿಸಿದ್ದಾರೆ. ಅಲ್ಲದೆ, ಸಂಘರ್ಷ ಸಾಹಿತ್ಯಕೂಟ, ವಿಚಾರಸಾಹಿತ್ಯ ಪ್ರಕಾಶನ, ಮಾನಸ ಸಾಹಿತ್ಯ ಪ್ರಕಾಶನ, ವಿಶ್ವಜ್ಞ ಸಾಹಿತ್ಯ ಪ್ರಕಾಶನ ಮುಂತಾದ ಹತ್ತಾರು ಸಾಹಿತ್ಯ ಪ್ರಕಾಶನಗಳ ಹುಟ್ಟಿಗೆ ಪ್ರೇರಕರಾದವರು ಮತ್ತು ಮಾರ್ಗದರ್ಶಕರಾಗಿ ಹಿತಚಿಂತಕರಾಗಿ ಈ ಎಲ್ಲ ಪ್ರಕಾಶನಗಳ ಮೂಲಕ

ನೂರಾರು ಕನ್ನಡ ಗ್ರಂಥಗಳು, ಜಾನಪದ ಗ್ರಂಥಗಳು ಗಡಿ ಭಾಗದಿಂದ ಪ್ರಕಟಗೊಳ್ಳಲು ಕಾರಣರಾದವರು ಪ್ರೊ. ಜ್ಯೋತಿ ಹೊಸೂರ ಅವರು. ಸಂಸ್ಥೆಯ ಪ್ರಕಾಶಕರಾದ ಸೌ॥ ಪುಷ್ಪಾ ಹೊಸೂರ (ಜ್ಯೋತಿ ಹೊಸೂರರ ಧರ್ಮಪತ್ನಿ) ಅವರ ಈ ನಿಟ್ಟಿನಲ್ಲಿಯ ಶ್ರಮ ಗಮನಾರ್ಹವಾದುದು.

ಜಾನಪದ ಪ್ರಸಾರ-ಪ್ರಚಾರ

ಕರ್ನಾಟಕದ ಉತ್ತರ ಗಡಿಭಾಗದಲ್ಲಿ ಜಾನಪದ, ಸಾಂಸ್ಕೃತಿಕ ಹಾಗೂ ವೈಚಾರಿಕ ಸಂಸ್ಥೆಗಳ ಸಂಘಟನೆಗಳನ್ನು ಮಾಡಿ, ಅವುಗಳ ಮೂಲಕ ಎಲ್ಲ ಹಂತದ ಜನಮನದ ಮೂಢನಂಬಿಕೆಗಳು, ಅನಿಷ್ಟ ಸಂಪ್ರದಾಯಗಳು, ಅನರ್ಥಕಾರಿಯಾದ ಆಚರಣೆಗಳು ಇತ್ಯಾದಿಗಳಲ್ಲಿಯ ಪೊಳ್ಳುತನಗಳನ್ನು ಮನವರಿಕೆ ಮಾಡಿಕೊಟ್ಟು ಅವುಗಳ ನಿವಾರಣೆಗಾಗಿ ವೈಜ್ಞಾನಿಕ ಮನೋಭಾವ ಒಡಮೂಡುವಂತೆ ಸಾಪ್ತಾಹಿಕ ವ್ಯಾಖ್ಯಾನಮಾಲೆ, ಚರ್ಚಾಗೋಷ್ಠಿ ಮತ್ತು ಕಾರ್ಯಗಾರ ಇತ್ಯಾದಿಗಳ ಆಯೋಜನೆ ಮಾಡುವುದರ ಮೂಲಕವಾಗಿ ಪರಿಣಾಮಕಾರಿಯಾಗಿ ದುಡಿದಿದ್ದಾರೆ.

'ಜಾನಪದ ಮಂಟಪ'ದ ವತಿಯಿಂದ ವಿವಿಧ ಬಗೆಯ ಜಾನಪದ ಸ್ಪರ್ಧೆಗಳ ಏರ್ಪಾಡು, ಜಾನಪದ ವಿವಿಧ ವಿಷಯಗಳ ಬಗೆಗೆ ವಿಚಾರ ಸಂಕಿರಣಗಳ ಸಂಘಟನೆ ಮತ್ತು ವಿದ್ಯಾರ್ಥಿಗಳು ಹಾಗೂ ತರುಣರಿಗಾಗಿ ಜಾನಪದ ಅಧ್ಯಯನ ತರಬೇತಿ-ಶಿಬಿರಗಳ ಆಯೋಜನೆ, ಜಾನಪದ ಸಂಗ್ರಹ ಸಂಪಾದನೆಗೆ ಸೂಕ್ತ ಮಾರ್ಗದರ್ಶನ ನೀಡಿದವರು ಜ್ಯೋತಿ ಹೊಸೂರರು. ಜಾನಪದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಿದ್ದಾರೆ.

ಪ್ರೊ. ಹೊಸೂರ ಅವರು 'ಕನ್ನಡ ಒಡಗತೆಗಳು' (ಒಗಟುಗಳ ಸಂಗ್ರಹ) ಹಾಗೂ 'ಕನ್ನಡ ಜನಪದ ಗದ್ಯ ಸಾಹಿತ್ಯ' (ಪ್ರಚಾರೋಪನ್ಯಾಸ) ಎರಡು ಕೃತಿಗಳನ್ನು ಪ್ರಕಟನೆಗೆ ಸಿದ್ಧಗೊಳಿಸಿದಂತೆ ತೋರುತ್ತದೆ. ಅವು ಪ್ರಕಟವಾದರೆ ಜನಪದ ಸಾಹಿತ್ಯಕ್ಕೆ ಎರಡು ಹೊಸ ಸೇರ್ಪಡೆಯಾದಂತಾಗುತ್ತವೆ.

ಹಾರೂಗೇರಿ ಮತ್ತು ರಾಯಬಾಗದಂತಹ ಕರ್ನಾಟಕದ ಉತ್ತರ ಗಡಿನಾಡಿನ ಹಿಂದುಳಿದ ಮತ್ತು ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ವಿವಿಧ ಹಂತದಲ್ಲಿ ಶಿಕ್ಷಕರಾಗಿ, ಉಪನ್ಯಾಸಕರಾಗಿ ಪದವಿ ಕಾಲೇಜಿನ ಪ್ರಾಧ್ಯಾಪಕ, ಪ್ರಾಚಾರ್ಯರಾಗಿ, ಆದರ್ಶಬೋಧಕರಾಗಿ ನಿರಂತರ ಮೂವತ್ತೈದು ವರ್ಷ ಶ್ರಮಿಸಿದ ಜ್ಯೋತಿ ಹೊಸೂರ ಅವರು ವಿದ್ಯಾರ್ಥಿಗಳಲ್ಲಿ ಆದರ್ಶ ಮತ್ತು ವೈಚಾರಿಕತೆಗಳನ್ನು ಬಿತ್ತಿದವರು, ಸಮರ್ಥ ವಿದ್ಯಾರ್ಥಿಗಳ ಬೆಳೆ ಬೆಳೆದವರು. ಅಂತೆಯೇ ಶಿಷ್ಟ ಸಾಹಿತ್ಯ ಅದಕ್ಕೂ ಮಿಗಿಲಾಗಿ ಜನಪದ ಸಾಹಿತ್ಯದ ಬೆಳೆಯನ್ನೇ ಬೆಳೆದವರು.

ಹಾಗೆ ನೋಡಿದರೆ, ಇವರು ಜಾನಪದ ಕ್ಷೇತ್ರ ಕಾರ್ಯವನ್ನು ಕೈಗೊಂಡು, ಜಾನಪದವನ್ನು ಕುರಿತು ಅಧ್ಯಯಿನಿಸಿ ಬರೆದುದು ಕಡಿಮೆ. ಇವರ ಜಾನಪದದ ಪ್ರಕಟನೆಗಳು ಬೆರಳೆಣಿಕೆಯಷ್ಟಿದ್ದರೂ ಸತ್ವ–ಸಾರಗಳ ದೃಷ್ಟಿಯಿಂದ ಅವೆಲ್ಲ ಶ್ರೇಷ್ಠದರ್ಜೆಯುವು. ಈ ಕೃತಿಗಳಲ್ಲಿ ಲೇಖಕರು ಜಾನಪದದ ಮೂಲಬೇರುಗಳನ್ನು ತೋರಿದ್ದಾರೆ; ಮೂಲಭೂತ ವಿಚಾರಸಂಗತಿಗಳನ್ನು ಅರುಹಿದ್ದಾರೆ. ಮೇಲಿಂದ ಮೇಲೆ ಬದಲಾಗುವ ಜಾನಪದವನ್ನು ಅದರ ಮೂಲದೊಂದಿಗೆ ಅರಿಯಲು ಹೊಸೂರರಂಥವರ ಬರೆಹಗಳು ಸಹಕಾರಿಯಾಗುತ್ತವೆ. ಜನಪದಕ್ಕೆ ಇವರು ನೀಡಿದ ಬಹುಮುಖ ಕೊಡುಗೆ ಗಟ್ಟಿಯಾದುದು ಮತ್ತು ಶಕ್ತಿಯುತವಾದುದು. ಹಾಗಾಗಿಯೇ ಇವರ ಜಾನಪದ ಸಾಧನೆ ತರುಣ ಜಾನಪದ ಮನಸ್ಸುಗಳಿಗೆ ಉಪಯುಕ್ತವಾಗಿದೆ. ಜಾನಪದದ ಹೊಸಹೊಸ ಅಧ್ಯಯನಗಳಿಗೆ, ಇವರ ಜಾನಪದ ಸಂಗ್ರಹ ಕೃತಿಗಳು ಆಕರಗಳಾಗಬಲ್ಲವು. ಕನ್ನಡದಲ್ಲಿ ಜಾನಪದ ಅಭ್ಯಾಸವನ್ನು ಪ್ರಾರಂಭಿಸಿದ ಮೊದಲಿಗರು ಅಥವಾ ಮೊದಲ ತಲೆಮಾರಿನ ಮೊದಲಿಗರು ಆನಂದಕಂದರಾದರೆ, ಉತ್ತರ ಕರ್ನಾಟಕದ ಎರಡನೇ ತಲೆಮಾರಿನ 'ಜಾನಪದ ತಜ್ಞ' ರಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡವರು ಶ್ರೀ ಜ್ಯೋತಿ ಹೊಸೂರರವರು.

* * *

ಉತ್ತರ ಕರ್ನಾಟಕದ ಉತ್ತಮ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಜ್ಯೋತೆಪ್ಪ ಶಿವಪ್ಪ ಹೊಸೂರ ಅವರು ಸೃಜನಶೀಲ ಶಿಷ್ಟಪದ ಹಾಗೂ ಜಾನಪದ ಎರಡೂ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಮಾಡಿ ಹೆಸರಾದವರು. ಗ್ರಂಥ ಪ್ರಕಾಶನ, ಸಾಹಿತ್ಯ ನಿಯತ ಕಾಲಿಕೆಗಳ ಪ್ರಕಾಶನ, ಸಾಹಿತ್ಯ ಪ್ರಚಾರ ಪ್ರಸಾರಗಳಲ್ಲಿ ಅವರ ದುಡಿಮೆಯಿದೆ. ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಶೋಧನೆ, ಪ್ರಕಟಣೆ, ವಿಶ್ಲೇಷಣೆಗಳಲ್ಲಿ ಸ್ವಂತ ಛಾಪು ಮೂಡಿಸಿದ್ದಾರೆ. ಜಾನಪದ ಮೂಲ ತತ್ವಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ವಸ್ತು ವೈವಿಧ್ಯ ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಬೋಧನೆ ಸಂಶೋಧನೆಗಳಲ್ಲಿ ಯುವಪೀಳಿಗೆಗೆ ಸ್ಫೂರ್ತಿಯಾಗಿದ್ದಾರೆ.

ಡಾ. ಸಿ.ಕೆ. ನಾವಲಗಿಯವರು ಬರೆದಿರುವ ವ್ಯಕ್ತಿಪರಿಚಯ ಜ್ಯೋತಿಹೊಸೂರ ಅವರ ಮೂಲ ಸಾಹಿತ್ಯದತ್ತ ಭೇಷರತ್ತಾಗಿ ಗಮನ ಸೆಳೆಯುತ್ತದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು